


ಟೋನಿ ಅಲಾಮೊ ಕ್ರೈಸ್ತ ಮಿನಿಸ್ಟ್ರಿಗಳು
ವಿಶ್ವ ಸುದ್ದಿಪತ್ರಿಕೆ
ಹೊಸ ಜೆರೂಸಲೆಮ್ ವಿಶ್ವಾದ್ಯಂತದ ಚರ್ಚುಗಳು
ಧರ್ಮಗುರು ಟೋನಿ ಅಲಾಮೊ ಅಲಾಮೊ ಕ್ರೈಸ್ತ ರಾಷ್ಟ್ರ ಸಂಪುಟ 20300



*ಪ್ಯಾಸ್ಟರ್ ಟೋನಿ ಅಲಾಮೊ*

# ಲೋಟನ ಹೆಂಡತಿ

## ಟೋನಿ ಅಲಾಮೊ ಅವರಿಂದ

**ದೇವರು ಪರಲೋಕದಲ್ಲಿ ಸೊದೋಮ್ಯರಿಗೆ ಪ್ರವೇಶ ನೀಡುವರು ಎಂದು ನಿಮಗನಿಸುತ್ತದೆಯೆ? ಹಾಗಾದರೆ, ಆತ ಸೊದೋಮ್, ಗೊಮೋರ, ಅದ್ಮ, ಮತ್ತು ಚೆಬೋಯೀಮ್ ಪಟ್ಟಣಗಳನ್ನು ನುಚ್ಚುನೂರು ಮಾಡಿ, ಅವುಗಳನ್ನು ಸುಟ್ಟು, ನೆಲಸಮ ಮಾಡಿದ್ದೇಕೆ ಎಂದು ನಾನು ತಿಳಿಯಬೇಕೆಂದಿದ್ದೇನೆ. ದೇವರು ಲೋಟನ ಹೆಂಡತಿಯನ್ನು ಉಪ್ಪಿನ ಕಂಬವನ್ನಾಗಿ ಮಾಡಿದ್ದೇಕೆ (ಆದಿಕಾಂಡ 19:24-26) ಎಂದು ಕೂಡ ನಾನು ತಿಳಿಯಬೇಕೆಂದಿದ್ದೇನೆ. ಅದೇಕೆಂದರೆ ಅವಳು ಹಿಂದಿರುಗಿ ನೋಡಿದಳು, ಮತ್ತು ಸೊದೋಮ್ ಇನ್ನೂ ಅವಳ ನೀತಿಭ್ರಷ್ಟ ಹೃದಯದಲ್ಲಿ ಬೇರೂರಿತ್ತು. ಹಿಂದಕ್ಕೆ ನೋಡಬಾರದೆಂದು ದೇವದೂತರು ಅವಳಿಗೆ ಸೂಚಿಸಿದ್ದರು (ಆದಿಕಾಂಡ 19:17).**

ದೇವರು ಪಾಪವನ್ನು ದ್ವೇಷಿಸುವುದರಿಂದ ಆ ಪಾಪಿ ಪಟ್ಟಣವನ್ನು ತಿರುಗಿಯೂ ನೋಡಬಾರದೆಂದು ಅವಳಿಗೆ ಹೇಳಲಾಗಿತ್ತು. “ನಾವು ಈ ಸ್ಥಳವನ್ನು ನಾಶಮಾಡುವುದಕ್ಕೆ ಬಂದವರು. ಇಲ್ಲಿಯವರ ವಿಷಯವಾಗಿ ಬಲು ದೊಡ್ಡ ಮೊರೆಯು ಯೆಹೋವನಿಗೆ ಮುಟ್ಟಿದ್ದರಿಂದ ಇವರನ್ನು ನಾಶಮಾಡುವುದಕ್ಕಾಗಿ ಆತನು ನಮ್ಮನ್ನು ಕಳುಹಿಸಿದ್ದಾನೆ” ಎಂದು ದೇವದೂತರು ಹೇಳಿದರು (ಆದಿಕಾಂಡ 19:13).

ಸೊದೋಮಿನ ಪಾಪ “ಹೆಮ್ಮೆಪಡುವುದು [’ಗರ್ವದಿಂದ ಭಂಗ; ಉಬ್ಬಿನಿಂದ ದೊಬ್ಬು.’ (ಜ್ಞಾನೋಕ್ತಿಗಳು 16:18)], ಹೊಟ್ಟೆ ತುಂಬಿಸಿಕೊಳ್ಳುವದು [ಹೊಟ್ಟೆಬಾಕತನ: ವಿನೋದಧಾಮವಾಗಿದ್ದ ಆ ಪಟ್ಟಣದಲ್ಲಿ ಮೇಲ್ಮಟ್ಟದ ಹಲವಾರು ಉಪಾಹಾರಗೃಹಗಳಿದ್ದವು], ಸ್ವಸುಖದಲ್ಲಿ ಮುಳುಗಿರುವುದು, ಇವು ಆಕೆಯಲ್ಲಿಯೂ ಆಕೆಯ ಕುಮಾರ್ತೆಯರಲ್ಲಿಯೂ ಇದ್ದವು [ಕೆಲಸವಿಲ್ಲದ ಮನಸ್ಸು ಭೂತದ ಕಾರ್ಯಾಗಾರ ಎಂಬಂತೆ], ಅಲ್ಲದೆ ಆಕೆಯು ದೀನದರಿದ್ರರಿಗೆ ಬೆಂಬಲವಾಗಿರಲಿಲ್ಲ [ದೇವರ ಕೆಲಸವನ್ನು ಎಳ್ಳಷ್ಟೂ ಮಾಡುವುದರ ಬಗ್ಗೆ ಅವಳು ಆಲೋಚಿಸಲೂ ಇಲ್ಲ]. ಅವರು ಸೊಕ್ಕೇರಿ ನನ್ನ ಕಣ್ಣೆದುರಿಗೆ ಅಸಹ್ಯಾಚಾರಗಳನ್ನು ನಡಿಸಿದರು [ದೇವರು ಹೇಳಿದರು].”[1]

ಸೊದೋಮ್ ಕುಪ್ರಸಿದ್ಧವಾಗಿ ದುಷ್ಟ ಪಟ್ಟಣವಾಗಿದ್ದರೂ, ಲೋಟನು ತನ್ನನ್ನು ಮತ್ತು ತನ್ನ ಕುಲದವರನ್ನು ಅಬ್ರಹಾಮನಿಂದ ಬೇರ್ಪಡಿಸಿದಾಗ, ಅವನು ಸೊದೋಮಿನತ್ತ ತನ್ನ ಗುಡಾರವನ್ನು ಹಾಕಲು ಆಯ್ದುಕೊಂಡನು (ಆದಿಕಾಂಡ 13:5-13). ಏಕೆಂದರೆ ಆ ಪಟ್ಟಣವನ್ನು ಸುತ್ತುವರಿದ ಫಲವತ್ತಾದ ಭೂಮಿ “ಎಲ್ಲಾ ಕಡೆಯಲ್ಲಿಯೂ ನೀರಾವರಿಯ ಸ್ಥಳವಾಗಿತ್ತು” (ಆದಿಕಾಂಡ 13:10), ಅಲ್ಲಿ ಹಲವಾರು ಖರ್ಜೂರದ ಮರಗಳು ಮತ್ತು ಹುಲುಸಾದ ಹುಲ್ಲು ಬೆಳೆದಿತ್ತು. ಅದೊಂದು ಓಯಸಿಸ್ ಆಗಿತ್ತು. ಸೊದೋಮ್ ಪಾಮ್ ಸ್ಪ್ರಿಂಗ್ಸ್, ಲಾಸ್ ವೇಗಸ್, ಬೆಲ್ ಏರ್, ಅಥವಾ ಬೆವರ್ಲಿ ಹಿಲ್ಸ್ ಇದ್ದಂತಿತ್ತು. ಅಲ್ಲಿನ ಜನರು ತಮ್ಮ ಜೀವಮಾನದಲ್ಲಿ ಸುಖದ ಸುಪ್ಪತ್ತಿಗೆಯಲ್ಲಿ ಬದುಕಿದರು, ಆದರೆ, ಅವರು, ಸೊದೋಮ್ ನವರು ಇಂದು ನರಕ ಮತ್ತು ಬೆಂಕಿಯ ಕೆರೆಯಲ್ಲಿ ಎಷ್ಟು ಸಂಕಟಕ್ಕೆ ಈಡಾಗಿದ್ದಾರೆ. ನರಕದಲ್ಲಾಗಲಿ, ಬೆಂಕಿಯ ಕೆರೆಯಲ್ಲಾಗಲಿ ಆನಂದದ ಉಪಾಹಾರಗೃಹಗಳಿಲ್ಲ ಅಥವಾ ವಿನೋದಧಾಮಗಳಿಲ್ಲ, ಆಡಂಬರದ ಭೋಜನಗಳಿಲ್ಲ, ಸವಿತಿನಿಸುಗಳಿಲ್ಲ. “ಲೋಭಿಯ ಅನ್ನವನ್ನು ಉಣ್ಣದಿರು; ಅವನ ರುಚಿಪದಾರ್ಥಗಳನ್ನು ಬಯಸಬೇಡ” (ಜ್ಞಾನೋಕ್ತಿಗಳು 23:6).

ದೇವರು ಲೋಟನ ಹೆಂಡತಿಯನ್ನು ನಾಶದಿಂದ ರಕ್ಷಿಸುತ್ತಿದ್ದರು, ಆದರೆ ಅವಳು ತನ್ನ ಹೃದಯದಲ್ಲಿ ಇನ್ನೂ ಸೊದೋಮ್‌ಅನ್ನು ಇಟ್ಟುಕೊಂಡಿದ್ದಳು. ಪಾಮ್ ಸ್ಪ್ರಿಂಗ್ಸ್/ಲಾಸ್ ವೇಗಸ್ ಪರಿಸರವನ್ನು ಬಿಡಲು ಅವಳಿಗಾಗುತ್ತಿರಲಿಲ್ಲ. ಮತ್ತಾಯ 6:24 ಹೀಗೆಂದು ಹೇಳುತ್ತದೆ, “ಯಾವನೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು; ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರಮಾಡುವನು. ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ,” ಅಥವಾ ದೇವರಿಗೆ ಹಾಗೂ ಮತ್ತೊಬ್ಬರಿಗೆ ಅಥವಾ ಬೇರೆ ಯಾವುದೇ ವಸ್ತುವಿಗೆ ಒಟ್ಟೊಟ್ಟಿಗೇ ನಿಷ್ಠೆಯಿಂದಿರಲಾರಿರಿ. ಲೋಟನ ಹೆಂಡತಿಯ ವಿಷಯದಲ್ಲಿ, ಅವಳು ಸೊದೋಮ್‌ಅನ್ನು ಪ್ರೀತಿಸಿ ದೇವರನ್ನು ದ್ವೇಷಿಸುತ್ತಿದ್ದಳು. ಆದುದರಿಂದಲೆ “ಅವಳು ಹಿಂದಿರುಗಿ ನೋಡಿದಳು” (ಆದಿಕಾಂಡ 19:26). ನೀವು ಏನನ್ನಾದರೂ ನೋಡುತ್ತಿದ್ದೀರಾ? ಉದಾಹರಣೆಗೆ, ಅಶ್ಲೀಲ ಚಿತ್ರವನ್ನು? ಹೌದಾದರೆ, ಅದೇ ನಿಮ್ಮ ಹೃದಯದಲ್ಲಿ ಹುದುಗಿದೆ.

ಬೈಬಲ್ ನಲ್ಲಿನ ಮೊದಲ ಮತ್ತು ಅತ್ಯಂತ ಮುಖ್ಯವಾದ ಆಜ್ಞೆಯನ್ನು ಮಾರ್ಕ 12:28-31ರಲ್ಲಿ ಹೇಳಲಾಗಿದೆ: “ಶಾಸ್ತ್ರಿಗಳಲ್ಲಿ ಒಬ್ಬನು ಅವರ ತರ್ಕವನ್ನು ಕೇಳಿ ಯೇಸು ಅವರಿಗೆ ಒಳ್ಳೆಯ ಉತ್ತರ ಕೊಟ್ಟನೆಂದು ತಿಳಿದು ಹತ್ತಿರಕ್ಕೆ ಬಂದು - ಎಲ್ಲಾ ಆಜ್ಞೆಗಳಲ್ಲಿ ಮೊದಲನೆಯದು ಯಾವದು ಎಂದು ಆತನನ್ನು ಕೇಳಿದ್ದಕ್ಕೆ ಯೇಸು - ಇಸ್ರಾಯೇಲ್ ಜನರೇ ಕೇಳಿರಿ, ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣಪ್ರಾಣದಿಂದಲೂ ಪೂರ್ಣಮನಸ್ಸಿನಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು ಎಂಬುದೇ ಮೊದಲನೆಯ ಆಜ್ಞೆ; ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ ಎರಡನೆಯ ಆಜ್ಞೆ; ಇವುಗಳಿಗಿಂತ ಹೆಚ್ಚಿನ ಆಜ್ಞೆ ಮತ್ತೊಂದಿಲ್ಲ ಎಂದು ಉತ್ತರಕೊಟ್ಟನು.”[2] ಏಕೆಂದರೆ ನಿಮ್ಮಲ್ಲಿರುವ ಎಲ್ಲದರೊಂದಿಗೆ ನೀವು

*(ಪುಟ 2ರಲ್ಲಿ ಮುಂದುವರಿದಿದೆ)*

**1** ಯಾಜಕಕಾಂಡ 18:22, 20:13, ಧರ್ಮೋಪದೇಶಕಾಂಡ 22:5, 23:17-18, 1 ಅರಸುಗಳು 14:24, ಯೂದನು 7 **2** ಧರ್ಮೋಪದೇಶಕಾಂಡ 4:29, 6:5, 10:12, 11:13, 13:3-4, 26:16, 30:6, ಯೆಹೋಶುವನು 22:5, ಮತ್ತಾಯ 22:37-40, ಲೂಕ 10:27, ಯಾಕೋಬನು 2:8-9

# ಲೋಟನ ಹೆಂಡತಿ

*(ಪುಟ 1 ರಿಂದ ಮುಂದುವರಿದಿದೆ)*

ದೇವರನ್ನು ಪ್ರೀತಿಸಿದರೆ ಮತ್ತು ನಿಮ್ಮ ನೆರೆಯವರನ್ನು ನಿಮ್ಮಂತೆಯೆ ಪ್ರೀತಿಸಿದರೆ, ನೀವು ಅವನನ್ನು ಕೊಲ್ಲುವುದಿಲ್ಲ. ಅವನ ಬಳಿ ಇರುವ ಯಾವುದಕ್ಕೂ ನೀವು ಆಸೆ ಪಡುವುದಿಲ್ಲ; ಅವನಿಂದ ನೀವು ಏನನ್ನೂ ಕದಿಯುವುದಿಲ್ಲ. ನೀವು ಅವನ ಮೇಲೆ ಸುಳ್ಳು ಆಪಾದನೆಗಳನ್ನು ಹೊರಿಸುವುದಿಲ್ಲ ಅಥವಾ ಅವನ ಬಗ್ಗೆ ಸುಳ್ಳು ಹೇಳುವುದಿಲ್ಲ; ಮತ್ತು ಅವನ ಹೆಂಡತಿಯೊಂದಿಗೆ ವ್ಯಭಿಚಾರ ಮಾಡುವುದಿಲ್ಲ. ನೀವು ಪ್ರಭುವಿನಲ್ಲಿ ನಿಮ್ಮ ತಂದೆಯನ್ನು ಮತ್ತು ತಾಯಿಯನ್ನು ಗೌರವಿಸುವಿರಿ; ನೀವು ವಾರದ ಏಳು ದಿನ ಸಬ್ಬತ್ ಆಚರಿಸುವಿರಿ (ಅಂದರೆ, ಯಾವಾಗಲೂ ಪವಿತ್ರಾತ್ಮನಲ್ಲಿ ನಡೆಯುವಿರಿ[3]). ನೀವು ವಿಗ್ರಹಗಳನ್ನು ಪೂಜಿಸುವುದಿಲ್ಲ, ಮತ್ತು ನೀವು ಪ್ರಭುವಿನ ಹೆಸರನ್ನು ವ್ಯರ್ಥವಾಗಿ ಬಳಸುವುದಿಲ್ಲ.[4] ನೀವು ಇವುಗಳಲ್ಲಿ ಯಾವುದೇ ಆಜ್ಞೆಯನ್ನು ಉಲ್ಲಂಘಿಸಿದ್ದರೆ, ಅದರಿಂದ ನಿಮ್ಮ ಆತ್ಮ ನರಕಕ್ಕೆ ಹೋಗುತ್ತದೆ, ಅದು ನೀವು ಅವೆಲ್ಲವನ್ನೂ ಉಲ್ಲಂಘಿಸಿದಷ್ಟೇ ಗಂಭೀರವಾಗಿರುತ್ತದೆ (ಯಾಕೋಬನು 2:10)

ಈಗ ಹೃದಯದ ವಿಷಯಕ್ಕೆ ಬರೋಣ. ನಾವು "ದೇವರಾದ ಕರ್ತನನ್ನು ಪೂರ್ಣಹೃದಯದಿಂದಲೂ ಪ್ರೀತಿಸಬೇಕು" (ಮಾರ್ಕ 12:30). ಹೃದಯವು ದೇವರ ಎದುರಿನ ನಿಜವಾದ ಯಜ್ಞವೇದಿ. ಲೋಟನ ಹೆಂಡತಿಯು ದೇವರನ್ನು ತನ್ನ ಪೂರ್ಣ ಹೃದಯದಿಂದ ಪ್ರೀತಿಸಿದಳೆ? ಇಲ್ಲ! ಮುಂಬರುವ ನಾಶನದಿಂದ ದೇವರು ಅವಳನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾಗ, ಅವಳ ಹೃದಯ ಇನ್ನೂ ಸೊದೋಮ್ ನಲ್ಲಿತ್ತು. ಅವಳ ಹೃದಯವು ಸೊದೋಮ್ ನ ಎದುರು ಒಂದು ಯಜ್ಞವೇದಿಯಾಗಿತ್ತೆ ಹೊರತು ದೇವರ ಎದುರಿನಲ್ಲಲ್ಲ. ಈ ಭೂಮಿಯ ಮೇಲೆ, ಈ ಜಗತ್ತಿನಲ್ಲಿ ಇಂದು ಹೆಚ್ಚಿನ ಜನರ ಕಥೆ ಇದೇ! ಹೃದಯವು ಆಲೋಚಿಸುವ, ಅನುಭವಿಸುವ ಮತ್ತು ನಿರ್ಧರಿಸುವ ಅಂತರಾತ್ಮ. ಲೋಟನ ಹೆಂಡತಿಯ ಆಲೋಚನೆಗಳು ಸೊದೋಮಿನಲ್ಲಿದ್ದುದರಿಂದ ಅವಳು ಹಿಂದಿರುಗಿ ಸೊದೋಮ್‌ಅನ್ನು ನೋಡಲು ನಿರ್ಧರಿಸಿದಳು. ಅವಳು ತನ್ನ ಆಲೋಚನೆಗಳನ್ನು ಅಲ್ಲಿಡಲು ನಿರ್ಧರಿಸಿದಳು.

ಬೈಬಲ್ ನಲ್ಲಿ, "ಹೃದಯ" ಎಂಬ ಪದಕ್ಕೆ ಆಧುನಿಕ ಮನಸ್ಸಿಗೆ ಇರುವುದಕ್ಕಿಂತ ಹೆಚ್ಚು ವಿಸ್ತಾರವಾದ ಅರ್ಥವಿದೆ. ಹೃದಯವು ಒಬ್ಬ ವ್ಯಕ್ತಿಗೆ ಕೇಂದ್ರವಾಗಿರುವ ಒಂದು ಭಾಗ. ಬೈಬಲ್ ನಲ್ಲಿ ಬಹುಮಟ್ಟಿಗೆ ಹೃದಯದ ಎಲ್ಲಾ ಉಲ್ಲೇಖಗಳು ಮಾನವ ವ್ಯಕ್ತಿತ್ವದ ಯಾವುದಾದರೊಂದು ಭಾಗವನ್ನು ಉಲ್ಲೇಖಿಸುತ್ತದೆ. ಬೈಬಲ್ ನಲ್ಲಿ, ಹೃದಯವು ಎಲ್ಲಾ ಭಾವನೆಗಳನ್ನು ಅನುಭವಿಸುತ್ತದೆ: ಪ್ರೀತಿ ಮತ್ತು ದ್ವೇಷ (ಕೀರ್ತನೆಗಳು 105:25, 1 ಪೇತ್ರನು 1:22); ಸಂತೋಷ ಮತ್ತು ದುಃಖ (ಪ್ರಸಂಗಿ 2:10, ಯೋಹಾನ 16:6); ಸಮಾಧಾನ ಮತ್ತು ಮನೋವ್ಯಥೆ (ಯೆಹೆಜ್ಕೇಲನು 27:31, ಕೊಲೊಸ್ಸೆಯವರಿಗೆ 3:15); ಧೈರ್ಯ ಮತ್ತು ಹೆದರಿಕೆ (ಆದಿಕಾಂಡ 42:28, ಆಮೋಸ 2:16). ಆಲೋಚನೆಯ ಪ್ರಕ್ರಿಯೆಗಳನ್ನು ಹೃದಯವು ನಡೆಸುತ್ತದೆ ಎಂದು ಹೇಳಲಾಗುತ್ತದೆ. ಈ ಬೌದ್ಧಿಕ ಚಟುವಟಿಕೆಯು ಇಂಗ್ಲಿಷಿನಲ್ಲಿ "ಮನಸ್ಸು" ಎಂದು ಕರೆಯುವುದಕ್ಕೆ ಸರಿಹೊಂದುತ್ತದೆ. ಹೀಗೆ, ಹೃದಯವು ಆಲೋಚಿಸಬಹುದು (ಎಸ್ತೇರಳು 6:6), ಅರ್ಥಮಾಡಿಕೊಳ್ಳಬಹುದು (ಯೋಬನು 38:36), ಕಲ್ಪಿಸಬಹುದು (ಯೆರೆಮೀಯ 9:14), ನೆನಪಿನಲ್ಲಿಟ್ಟುಕೊಳ್ಳಬಹುದು (ಧರ್ಮೋಪದೇಶಕಾಂಡ 4:9), ತಿಳುವಳಿಕೆಯುಳ್ಳದ್ದಾಗಿರಬಹುದು (ಜ್ಞಾನೋಕ್ತಿಗಳು 2:10), ಮತ್ತು ತನಗೆ ತಾನೇ ಮಾತನಾಡಿಕೊಳ್ಳಬಹುದು (ಧರ್ಮೋಪದೇಶಕಾಂಡ 7:17).

ಹೃದಯವು ನಿರ್ಧಾರಗಳನ್ನೂ ತೆಗೆದುಕೊಳ್ಳುತ್ತದೆ. ಹಿಂದೆ ತಿರುಗಿ ನೋಡಬಾರದೆಂದು ಅವಳಿಗೆ ಹೇಳಲಾಗಿದ್ದರೂ ಲೋಟನ ಹೆಂಡತಿ ಹಿಂದೆ ತಿರುಗಿ ನೋಡಲು ನಿರ್ಧರಿಸಿದಳು, ಇಂದಿನ ವಿವಾಹಿತ ಸ್ತ್ರೀಯರು ತಮ್ಮ ಗಂಡಂದಿರಿಗೆ ಮೋಸ ಮಾಡಿ ಮೇಲೆ ವ್ಯಭಿಚಾರ ನಡೆಸಲು ನಿರ್ಧರಿಸುವಂತೆಯೇ. ಅವರ ಹೃದಯಗಳೂ ಲೋಟನ ಹೆಂಡತಿಯಂತೆ ಸೊದೋಮ್ ನಲ್ಲಿವೆ ಹಾಗೆ ಹೇಳುವುದಾದರೆ, ಅವರು "ಸಹೋದರಿಯರು". ಅವರು ಪುರುಷರ ವಿರುದ್ಧ ಸುಳ್ಳು ಆಪಾದನೆಗಳನ್ನು ಹೊರಿಸಲು ತಮ್ಮ ಹೃದಯಗಳಲ್ಲಿ ನಿರ್ಧರಿಸಿದರು, ಅವರು ಪುರುಷರಿಂದ ಬಲಾತ್ಕಾರಕ್ಕೆ ಒಳಗಾಗದಿದ್ದರೂ, ತಮ್ಮನ್ನು ಬಲಾತ್ಕಾರ ಮಾಡಿದರು ಎಂದು ಹೇಳುವರು. ಇದೊಂದು ಸೋಂಕು, ಭೂಮಿಯನ್ನು ಹೊದ್ದಿರುವ ಸುಳ್ಳುಗಳ ಮಹಾ ಅಲೆ.

ಅಲ್ಲದೆ, ರೋಮ್ ನಲ್ಲಿ ಮುಖ್ಯ ಕಚೇರಿಯನ್ನು ಹೊಂದಿರುವ ವಿಶ್ವ ಸರ್ಕಾರವು[5], ನೂರಾರು ಮಿಲಿಯಗಟ್ಟಲೆ ಜೀವಗಳನ್ನು ನಾಶ ಮಾಡಿ ಪ್ರತಿಯೊಂದು ದೇಶದ ಮೂಲ ನಾಯಕರನ್ನು ತೊಲಗಿಸಿ, ಹೊಸ ವಿಶ್ವ ಪಂಥದಲ್ಲಿ ತರಬೇತಿ ಪಡೆದ ತಮ್ಮ ಸ್ವಂತ ಜನರೊಂದಿಗೆ ಬದಲಾವಣೆ ಮಾಡಿ, ಏನೇ ಆಗಲಿ, ಪ್ರತಿಯೊಂದು ದೇಶದ ನಿಯಂತ್ರಣವನ್ನು ಪಡೆಯಲು ನಿರ್ಧರಿಸಿದೆ. ಆದರೆ, ಏಕಕಾಲದಲ್ಲಿ ಎಲ್ಲೆಲ್ಲೂ ಇರುವ ದೇವರು ಎಲ್ಲವನ್ನೂ ನೋಡುತ್ತಾರೆ, ಆತನ ಪವಿತ್ರ ದೇವದೂತರೂ ನೋಡುತ್ತಾರೆ.[6] ದೇವರು ನಮ್ಮ ಹೃದಯಗಳನ್ನು ಬಲ್ಲರು.[7] ಈ

**3** ರೋಮಾಪುರದವರಿಗೆ 8:1-14, ಗಲಾತ್ಯದವರಿಗೆ 5:14-25
**4** ವಿಮೋಚನಕಾಂಡ 20:1-17, ಧರ್ಮೋಪದೇಶಕಾಂಡ 5:1-22

**5** ದಾನಿಯೇಲನು 2:40, 7:19-25, ಪ್ರಕಟನೆ13:2-8, 17:1-9, 18 **6** 1 ಸಮುವೇಲನು 16:7, 2 ಪೂರ್ವಕಾಲವೃತ್ತಾಂತ 16:9, ಯೋಬನು 34:21, ಕೀರ್ತನೆಗಳು 44:21, 139:3-12, 147:4-5, ಯೆಶಾಯ 46:9-10, ಯೆರೆಮೀಯ 1:4-5, 23:23-24, 32:18-19, ಆಮೋಸನು 9:1-4, ಜೆಕರ್ಯನು 4:10, ಮತ್ತಾಯ 6:8, 31-32, 10:26, 12:36, 25:31-46, ಮಾರ್ಕ 4:22, ಲೂಕ 8:17, 12:2, ಅಪೋಸ್ತಲರ ಕೃತ್ಯಗಳು 15:18, ಇಬ್ರಿಯರಿಗೆ 4:13, 1 ಯೋಹಾನ 3:20, ಯೂದನು 14-15 **7** ಆದಿಕಾಂಡ 6:5-7, 1 ಪೂರ್ವಕಾಲವೃತ್ತಾಂತ 28:9, 2 ಪೂರ್ವಕಾಲವೃತ್ತಾಂತ 19:2-3, 32:31, ಕೀರ್ತನೆಗಳು 44:20-21, 73:1, ಪ್ರಸಂಗಿ 11:9-10, ಯೆಶಾಯ 14:9-17, ಯೆಹೆಜ್ಕೇಲನು 11:17-21, 14:1-8, ಮತ್ತಾಯ 5:8, 2 ಕೊರಿಂಥದವರಿಗೆ 9:7, ಇಬ್ರಿಯರಿಗೆ 4:12-13, 1 ಪೇತ್ರನು 3:1-4, 1 ಯೋಹಾನನು 3:18-21


ಅಲಾಮೊ ಮಿನಿಸ್ಟ್ರೀಸ್ ಆನ್‌ಲೈನ್
www.alamoministries.com

## ಉಗಾಂಡಾ

ನಾನು ಅಲಾಮೊ ಚರ್ಚಿನ ಪ್ರೇಮಿ. ನಾನು ಪ್ಯಾಸ್ಟರ್ ಟೋನಿ ಅಲಾಮೊ ಮಿನಿಸ್ಟ್ರಿಗಳ ಒಂದು ಭಾಗ ಎಂದು ನನಗನಿಸುತ್ತದೆ. ನಿಜವಾದ ದೇವರ ಪದವನ್ನು ಉಪದೇಶಿಸುವ ಏಕೈಕ ಚರ್ಚ್ ಇದು ಎಂಬುದನ್ನು ನಾನು ನೋಡಿದ್ದೇನೆ. ನಾನು ಹಲವಾರು ಚರ್ಚುಗಳಿಗೆ ಹೋಗಿದ್ದೇನೆ. ಆದರೆ ನಿಜವಾದ ಸತ್ಯವನ್ನು ತಿಳಿದುಕೊಳ್ಳುವುದರಲ್ಲಿ ವಿಫಲನಾಗಿದ್ದೇನೆ, ಆದರೆ ನಾನು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತಾ ಸಾಹಿತ್ಯವನ್ನು ಓದಲು ಪ್ರಾರಂಭಿಸಿದಾಗ, ಓ ದೇವರೇ, ನನ್ನ ಬದುಕು ಪ್ರಚಂಡವಾಗಿ ಬದಲಾಯಿತು.




ಪ್ರಾಸಂಗಿಕವಾಗಿ, ಕೇವಲ ಒಂದು ಸುದ್ದಿಪತ್ರಿಕೆಯನ್ನು ಓದಿದ ನಂತರ ನಾನು ಇತ್ತೀಚೆಗೆ ನನ್ನ ಬದುಕನ್ನು ನವೀಕರಿಸಿಕೊಂಡಿದ್ದೇನೆ; ನಾನು ಪರಿವರ್ತನೆಗೊಳ್ಳಲು ಅದು ಸಾಕಾಯಿತು. ಈ ಚರ್ಚಿನ ವಿರುದ್ಧ ಹೋರಾಡಿ ಸತ್ಯವನ್ನು ನಿರ್ಲಕ್ಷಿಸಲು ನಿರ್ಧರಿಸುವವರ ಬಗ್ಗೆ ನನಗೆ ಕನಿಕರವುಂಟಾಗುತ್ತದೆ. ಅವರು ಅದರ ವಿರುದ್ಧ ಎಷ್ಟು ಹೋರಾಡುತ್ತಾರೋ, ಸತ್ಯದಿಂದ ಅಷ್ಟೇ ದೂರ ಉಳಿಯುತ್ತಿದ್ದಾರೆ ಮತ್ತು ಬೇಗನೆ ಪಾತಾಳಕ್ಕೆ ಬೀಳಲಿದ್ದಾರೆ. ಇದನ್ನು ಹೇಳಲು ನನಗೆ ವಿಷಾದವಾಗುತ್ತದಾದರೂ ಇದು ಸತ್ಯ. ಅವರಲ್ಲಿ ನೀವೂ ಒಬ್ಬರೇ ಎಂದು ನಿಮ್ಮನ್ನು ಕೇಳಿಕೊಳ್ಳಿ. ದೇವರು ನಿಮ್ಮಿಂದ ತನ್ನ ಸ್ವಯಂಪ್ರೇರಿತ ಉಸಿರನ್ನು ತೆಗೆದುಕೊಂಡರೆ, ನೀವು ಶಾಶ್ವತವಾಗಿ ಆತನೊಂದಿಗೆ ಇರುವಿರೋ ಅಥವಾ ನಿಮ್ಮ ಶಾಶ್ವತ ಬದುಕಿನ ಉಳಿದ ಭಾಗವನ್ನು ಬೆಂಕಿಯ ಕೆರೆಯಲ್ಲಿ ಕಂಠ ಹರಿದು ಕಿರುಚಾಡುತ್ತಿರುತ್ತೀರೋ?? ಆಲೋಚನೆಗಾಗಿ ಒಂದು ವಿಷಯ☺

ನುವಾಹ ಆಸ್ಕರ್ ಬರಾರಾ, ಉಗಾಂಡಾ

ದುಷ್ಟ ಪುರುಷರು ಮತ್ತು ಸ್ತ್ರೀಯರ ಹೃದಯಗಳಿಂದ ಯಾವುದೇ ಪ್ರಾರ್ಥನೆಗಳು, ಪ್ರಾರ್ಥನೆಯ ಧೂಪದ್ರವ್ಯಗಳು ಮೇಲೇಳುತ್ತಿಲ್ಲ ಎಂದು ಆತ ನೋಡುತ್ತಾರೆ.

ಹೃದಯದ ಇತರ ಚಟುವಟಿಕೆಗಳು ಉದ್ದೇಶ (ಅಪೋಸ್ತಲರ ಕೃತ್ಯಗಳು 11:23), ಸಂಕಲ್ಪ (ಇಬ್ರಿಯರಿಗೆ 4:12), ಮತ್ತು ಚಿತ್ತ (ಎಫೆಸದವರಿಗೆ 6:6) ಆಗಿವೆ. ಪ್ರಭುವನ್ನು ಅನುಸರಿಸುವುದು ಅಥವಾ ಆತನನ್ನು ಅನುಸರಿಸದೆ ಇರುವುದು ನಮ್ಮ ಉದ್ದೇಶ, ಸಂಕಲ್ಪ ಅಥವಾ ನಮ್ಮ ಚಿತ್ತವಾಗಿರುತ್ತದೆ. ಕೊನೆಯದಾಗಿ, ಹೃದಯ ಎಂದರೆ ಒಬ್ಬ ವ್ಯಕ್ತಿಯ ನಿಜವಾದ ಗುಣ ಅಥವಾ ವ್ಯಕ್ತಿತ್ವ. ಇದರಲ್ಲಿ ಪರಿಶುದ್ಧತೆ ಅಥವಾ ದುಷ್ಟತನ (ಯೆರೆಮೀಯ 3:17, ಮತ್ತಾಯ 5:8); ಹೃತ್ಪೂರ್ವಕವಾಗಿರುವಿಕೆ ಅಥವಾ ಕಠಿಣತೆ - ಉದಾಹರಣೆಯಾಗಿ, ಲೋಟನ ಹೆಂಡತಿಯ ಹೃದಯವು ಸೊದೋಮ್ ನತ್ತ ನೈಜವಾಗಿತ್ತು, ಆದರೆ ಕರ್ತನಾದ ದೇವರ ಕಡೆಗೆ ಕಠಿಣವಾಗಿತ್ತು, ಇಂದು ಜಗತ್ತಿನ ಹೆಚ್ಚಿನ ಜನಸಂಖ್ಯೆಯೊಂದಿಗಿರುವಂತೆ (ವಿಮೋಚನಕಾಂಡ 4:21, ಕೊಲೊಸ್ಸೆಯವರಿಗೆ 3:22) - ಮತ್ತು ಯಥಾರ್ಥತೆ ಅಥವಾ ಅವಿಧೇಯತೆ (ಕೀರ್ತನೆಗಳು 101:2, ಯೆರೆಮೀಯ 5:23) ಗುಣಗಳು ಸೇರಿವೆ. ಇವೆಲ್ಲವೂ ಪ್ರತಿಯೊಬ್ಬ ವ್ಯಕ್ತಿಯ ಹೃದಯ ಅಥವಾ ನಿಜವಾದ ಗುಣವನ್ನು ವಿವರಿಸುತ್ತವೆ. ದೇವರು ಪ್ರತಿಯೊಬ್ಬ ವ್ಯಕ್ತಿಯ ಹೃದಯವನ್ನು ಬಲ್ಲರು.

ಸಮುವೇಲನು ಪ್ರಥಮ ಭಾಗ 16:7 ಹೀಗೆಂದು ಹೇಳುತ್ತದೆ, “ಆದರೆ ಯೆಹೋವನು ಸಮುವೇಲನಿಗೆ - ನೀನು ಅವನ ಚೆಲುವನ್ನೂ ನೀಳವನ್ನೂ ನೋಡಬೇಡ; ನಾನು ಅವನನ್ನು ತಳ್ಳಿಬಿಟ್ಟಿದ್ದೇನೆ. ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ ಅಂದನು.”

ಜನರು ತಮ್ಮ ಹೃದಯಗಳಿಂದ ಮಾತನಾಡಿ ನಡೆದುಕೊಳ್ಳುವುದರಿಂದ, ಅವರು ಅವುಗಳನ್ನು ಜಾಗ್ರತೆಯಿಂದ ನೋಡಿಕೊಳ್ಳಬೇಕು (ಮತ್ತಾಯ 15:18-19). “ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ; ಅದರೊಳಗಿಂದ ಜೀವಧಾರೆಗಳು ಹೊರಡುವವು” (ಜ್ಞಾನೋಕ್ತಿಗಳು 4:23).

ಯಾರೇ ಆಗಲಿ, ಅವರ ಅತ್ಯಂತ ಮುಖ್ಯ ಕೆಲಸವೆಂದರೆ ದೇವರನ್ನು ಪೂರ್ಣ ಹೃದಯದಿಂದ ಪ್ರೀತಿಸುವುದು (ಮತ್ತಾಯ 22:37). ಹೃದಯದೊಂದಿಗೆ, ಒಬ್ಬ ವ್ಯಕ್ತಿ ಕ್ರಿಸ್ತರನ್ನು ನಂಬುತ್ತಾನೆ, ಈ ರೀತಿಯಲ್ಲಿ ದೇವರಿಂದ ಪ್ರೀತಿಯನ್ನು ಮತ್ತು ಹೃದಯದಲ್ಲಿ ಕ್ರಿಸ್ತರ ಇರುವಿಕೆ ಇವೆರಡನ್ನೂ ಅನುಭವಿಸುತ್ತಾನೆ (ಯೆರೆಮೀಯ 29:13, ರೋಮಾಪುರದವರಿಗೆ 5:5, 10:9-10, ಎಫೆಸದವರಿಗೆ 3:17-19).

ಹಳೆ ಒಡಂಬಡಿಕೆಯಲ್ಲಿ ಯಜ್ಞವೇದಿಯು ನಮ್ಮ ಹೃದಯಗಳ ಸಂಕೇತವಾಗಿದೆ. ಮೋಶೆಯನ ಕಾಲದಲ್ಲಿ, ಯಾಜಕರಿಗೆ ಯೋಗ್ಯವಾದಂಥ ಎರಡು ಯಜ್ಞವೇದಿಗಳು ಅರಣ್ಯದಲ್ಲಿ ಗುಡಾರದ ಧರ್ಮಾಚರಣೆಯಲ್ಲಿ ಮುಖ್ಯ ಪಾತ್ರಗಳನ್ನು ವಹಿಸಿದವು. ಇವು ಯಜ್ಞವೇದಿ (ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡುವ ಎಲ್ಲರಿಗಾಗಿ ಕ್ರಿಸ್ತರ ಮೃತ್ಯುವಿನ ಸಂಕೇತ[8]) ಮತ್ತು ಧೂಪವೇದಿ (ಇದು ನಮ್ಮ ಹೃದಯಗಳಿಂದ ಬರುವ ಆತನಲ್ಲಿ ನಮ್ಮ ಕೋರಿಕೆಗಳಿಗಾಗಿ ದೇವರಲ್ಲಿ ಮತ್ತು ಕ್ರಿಸ್ತರಲ್ಲಿ ನಮ್ಮ ನಂಬಿಕೆಯ ಪ್ರಾರ್ಥನೆಗಳ ಸಂಕೇತವಾಗಿದೆ[9]). ಯಜ್ಞವೇದಿಯನ್ನು (ವಿಮೋಚನಕಾಂಡ 27:1-8) ದೇವದರ್ಶನದ ಗುಡಾರದ ಬಾಗಿಲಿನ ಮುಂದುಗಡೆಯಲ್ಲಿ ಇಡಲಾಯಿತು (ವಿಮೋಚನಕಾಂಡ 40:6). (ದೇವದರ್ಶನದ ಗುಡಾರವು ನಂಬುವವರಾದ ನಮ್ಮ ಸಂಕೇತವಾಗಿದೆ, ನಿಜವಾಗಿಯೂ ಕ್ರಿಸ್ತರ ದೇಹವಾದವರ, ಆತನ ದೇವಾಲಯ ಅಥವಾ ಗುಡಾರವಾದವರ ಸಂಕೇತವಾಗಿದೆ.[10])

ಪ್ರಕಟನೆ 8:3ರಲ್ಲಿ ಉಲ್ಲೇಖಿಸಲಾದ ಯಜ್ಞವೇದಿಯನ್ನು ಮತ್ತು ನಮ್ಮ ಹೃದಯಗಳಿಂದ ಬರುವ ಪ್ರಾರ್ಥನೆಗಳನ್ನು ಕುರಿತಂತೆ, ನಾವು ಹೀಗೆಂದು ಓದುತ್ತೇವೆ, “ಆಮೇಲೆ ಮತ್ತೊಬ್ಬ ದೇವದೂತನು ಬಂದು ಯಜ್ಞವೇದಿಯ ಬಳಿಯಲ್ಲಿ ನಿಂತನು; ಅವನ ಕೈಯಲ್ಲಿ ಚಿನ್ನದ ಧೂಪಾರತಿ ಇತ್ತು. ಸಿಂಹಾಸನದ ಮುಂದಣ ಚಿನ್ನದ ಧೂಪವೇದಿಯ [ನಮ್ಮ ಹೃದಯಗಳ ಸಂಕೇತವಾಗಿದೆ] ಮೇಲೆ ದೇವಜನರೆಲ್ಲರ ಪ್ರಾರ್ಥನೆಗಳ ಜೊತೆಯಲ್ಲಿ ಸಮರ್ಪಿಸುವುದಕ್ಕಾಗಿ ಅವನಿಗೆ ಬಹಳ ಧೂಪವನ್ನು ಕೊಡಲಾಯಿತು.”

ಈಗ ಪ್ರಾಣವನ್ನು ನೋಡೋಣ. ಪ್ರಾಣವು ಸ್ವ-ಜೀವವಾಗಿದೆ. ನಾವು ನಮ್ಮನ್ನು ನಿರಾಕರಿಸಬೇಕೆಂದು ದೇವರು ಆಜ್ಞಾಪಿಸುತ್ತಾರೆ, ಅಂದರೆ ನಾವು

*(ಪುಟ 4ರಲ್ಲಿ ಮುಂದುವರಿದಿದೆ)*

**8** ಕೀರ್ತನೆಗಳು 40:5-8, ಮತ್ತಾಯ 20:28, 26:28, ಲೂಕ 24:46-47, ಯೋಹಾನನು 1:29, 3:14-17, 6:51, 10:11-18, 11:49-52, ಅಪೋಸ್ತಲರ ಕೃತ್ಯಗಳು 5:30-31, 20:28, 26:23, ರೋಮಾಪುರದವರಿಗೆ 3:22-26, 5:6-21, 1 ಕೊರಿಂಥದವರಿಗೆ 15:3-4, ಗಲಾತ್ಯದವರಿಗೆ 1:3-4, 2:20, 4:4-5, ಎಫೆಸದವರಿಗೆ 1:7, 2:13-18, 5:2, ಕೊಲೊಸ್ಸೆಯವರಿಗೆ 1:14, 20-23, 2:13-15, 1 ಥೆಸಲೋನಿಕದವರಿಗೆ 5:9-10, 1 ತಿಮೊಥೆಯನಿಗೆ 2:5-6, ತೀತನಿಗೆ 2:13-14, ಇಬ್ರಿಯರಿಗೆ 2:9-10, 7:24-27, 9:6-7, 11-28, 10:4-14, 18-20, 26, 13:12, 1 ಪೇತ್ರನು 1:18-21, 3:18, ಪ್ರಕಟನೆ 1:5-6 **9** ಪ್ರಕಟನೆ 8:3-4 **10** 1 ಕೊರಿಂಥದವರಿಗೆ 3:16-17, 6:19-20, 2 ಕೊರಿಂಥದವರಿಗೆ 6:16, ಎಫೆಸದವರಿಗೆ 2:19-22

## ಮೆಕ್ಸಿಕೊ

*(ಸ್ಪ್ಯಾನಿಷ್ ಭಾಷೆಯಿಂದ ಅನುವಾದಿಸಲಾಗಿದೆ)*

ಪ್ಯಾಸ್ಟರ್ ಟೋನಿ ಮತ್ತು ನಿಮ್ಮ ಸಂಪೂರ್ಣ ಭಕ್ತವೃಂದಕ್ಕೆ ನಮಸ್ಕಾರ,

ದೇವರು ನಿಮಗೆ ಅನುಗ್ರಹಿಸಲಿ ಮತ್ತು ಎಲ್ಲಾ ಕೆಡುಕಿನಿಂದ ರಕ್ಷಿಸಲಿ. ಪ್ರೀತಿಯ ಪ್ಯಾಸ್ಟರ್, ಬೈಬಲ್ಲಿನ ಭವಿಷ್ಯವಾಣಿಗಳ ಅಂತಿಮ ಘಟನೆಗಳು ಬೇಗನೆ ನೆರವೇರಲಿವೆ. ಕ್ರಿಸ್ತರು ಬೇಗನೆ ಬರಲಿದ್ದಾರೆ. ನಿಮ್ಮ ಮಿನಿಸ್ಟ್ರಿಗಾಗಿ ಮತ್ತು ನೀವು ಬರೆಯುತ್ತಿರುವ ಮತ್ತು ಪ್ರತಿಯೊಂದು ದೇಶಕ್ಕೆ ಸಾಕ್ಷಿಯಾಗಿ ಜಾಗತಿಕ ಮಟ್ಟದಲ್ಲಿ ಹಂಚಲಾಗುತ್ತಿರುವ ನಿಮ್ಮ ಸಾಹಿತ್ಯಕ್ಕಾಗಿ ನಾನು ಕ್ರಿಸ್ತರ ಮೂಲಕ ದಿವ್ಯ ತಂದೆಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾನು ನಿಮ್ಮ ಸಾಹಿತ್ಯವನ್ನು ಹಂಚುವುದನ್ನು ಮುಂದುವರಿಸುತ್ತೇನೆ.

ನಾನು ಈಗಾಗಲೆ ಸುದ್ದಿಪತ್ರಿಕೆಗಳು ಮತ್ತು ಎರಡು ಟಿ ಷರ್ಟುಗಳ ಒಂದು ದೊಡ್ಡ ಪೆಟ್ಟಿಗೆಯನ್ನು ಪಡೆದಿದ್ದೇನೆ. ಧನ್ಯವಾದಗಳು. ನಿಮಗಾಗಿ ಮತ್ತು ನಿಮ್ಮ ಮಿನಿಸ್ಟ್ರಿಗಾಗಿ ಪ್ರಾರ್ಥಿಸುವುದನ್ನು ನಾನು ಮುಂದುವರಿಸುತ್ತೇನೆ, ಮತ್ತು ದೇವರು ನ್ಯಾಯ ಒದಗಿಸಲಿ ಹಾಗೂ ರಕ್ಷಣೆಯ ಸಂದೇಶವು ಜಗತ್ತಿಗೆ ಸಾರಲ್ಪಡುವುದು ಮುಂದುವರಿಯಲಿ ಎಂದು, ನಿಮ್ಮ ಮಿನಿಸ್ಟ್ರಿಯ ಪ್ರತಿಯೊಂದು ಅಗತ್ಯತೆಯನ್ನು ಆತ ಪೂರೈಸಲಿ ಎಂದು ನಾನು ಮತ್ತು ನನ್ನ ಹೆಂಡತಿ ಉಪವಾಸ ಕೂಡ ಮಾಡುತ್ತೇವೆ.

ಪ್ರೀತಿಯ ಪ್ಯಾಸ್ಟರ್, ದೇವರು ನಿಮ್ಮನ್ನು ಸಮೃದ್ಧವಾಗಿ ಅನುಗ್ರಹಿಸಲಿ, ಮತ್ತು ನಾನು ನಿಮ್ಮ ಸಾಹಿತ್ಯವನ್ನು ಇಲ್ಲಿ ಹಂಚುತ್ತೇನೆ.

ಕ್ರಿಸ್ತ ಯೇಸುವಿನಲ್ಲಿ ನಿಮ್ಮವನಾದ

ಏಬಲ್ ಗುಟಿರೆಜ್ — ಗುವಾನಹ್ವಾಟೊ, ಮೆಕ್ಸಿಕೊ





*ಸಹೋದರ ಗುಟಿರೆಜ್ ಅವರು ಮೆಕ್ಸಿಕೊದ ಗುವಾನಹ್ವಾಟೊದ ಬೀದಿ ಮಾರುಕಟ್ಟೆಯಲ್ಲಿ ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯವನ್ನು ಹಂಚುತ್ತಿರುವುದು*

# ಲೋಟನ ಹೆಂಡತಿ

*(ಪುಟ 3 ರಿಂದ ಮುಂದುವರಿದಿದೆ)*

ನಮ್ಮ ಪ್ರಾಣವನ್ನು ನಿರಾಕರಿಸಿ ನಮ್ಮ ಆತ್ಮಕ್ಕೆ ತಕ್ಕಂತೆ ಬದುಕಬೇಕು.[11] ನಾವು ಪ್ರಭುವನ್ನು ನಮ್ಮ ವೈಯಕ್ತಿಕ ರಕ್ಷಕರನ್ನಾಗಿ ಸ್ವೀಕರಿಸಿದಾಗ, ಆತನ ಆತ್ಮ ನಮ್ಮ ಆತ್ಮವನ್ನು ಪ್ರವೇಶಿಸುತ್ತದೆ.[12] ಆಗ ನಾವು ಪವಿತ್ರಾತ್ಮಕ್ಕೆ ತಕ್ಕಂತೆ ಬದುಕಬೇಕು ಮತ್ತು ನಮ್ಮ ಪ್ರಾಣವನ್ನು, ಅಂದರೆ ನಮ್ಮ ಹಿಂದಿನ ಪಾಪದ ಬದುಕನ್ನು, ನಿರಾಕರಿಸಬೇಕು. ನಾವು ಆತ್ಮಕ್ಕೆ ತಕ್ಕಂತೆ ಬದುಕಿದಾಗ, ನಮ್ಮ ಆತ್ಮದಲ್ಲಿ ಪ್ರಭುವಿನ ಆತ್ಮ ಬದುಕುತ್ತಿರುವಾಗ ಮತ್ತು ಕೆಲಸ ಮಾಡುತ್ತಿರುವಾಗ ನಾವು ಹಾಗೆ ಮಾಡುತ್ತೇವೆ, ನಮ್ಮ ಪ್ರಾಣವು ಸ್ವಯಂ ಆಗಿ ನಿರಾಕರಿಸಲ್ಪಡುತ್ತದೆ.[13]

"ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವುದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ, ಖಡ್ಗವನ್ನು [ಖಡ್ಗ ಎಂದರೆ ದೇವರ ಪದ[14]]. ಹಾಕುವುದಕ್ಕೆ ಬಂದೆನು. ಹೇಗೆಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ ಭೇದ ಹುಟ್ಟಿಸುವದಕ್ಕೆ ಬಂದೆನು. ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು. ತಂದೆಯ ಮೇಲಾಗಲಿ ತಾಯಿಯ ಮೇಲಾಗಲಿ ನನ್ನ ಮೇಲೆ ಇಡುವುದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ [ಅದೊಂದು ದುರ್ಗಮ ಮಾರ್ಗ, ಆದರೆ ನಾವು ಶಾಶ್ವತತೆಯನ್ನು ಪರಲೋಕದಲ್ಲಿ ಕಳೆಯಬೇಕೆಂದು ಇಚ್ಛಿಸಿದರೆ ಆ ಮಾರ್ಗದಲ್ಲಿ ನಡೆಯಲೇಬೇಕು]. ಮತ್ತು ಯಾವನಾದರೂ ತನ್ನ ಶಿಲುಬೆಯನ್ನು ತೆಗೆದುಕೊಂಡು ನನ್ನ ಹಿಂದೆ ಬಂದ ಹೊರತು ನನಗೆ ಯೋಗ್ಯನಲ್ಲ. ತನ್ನ ಬದುಕನ್ನು [ಆತ್ಮ ಅಥವಾ ಲೌಕಿಕ] ಕಂಡುಕೊಂಡವನು ಅದನ್ನು ಕಳೆದುಕೊಳ್ಳುವನು; ನನ್ನ ನಿಮಿತ್ತವಾಗಿ ತನ್ನ ಬದುಕನ್ನು [ಆತ್ಮ ಅಥವಾ ಲೌಕಿಕ] ಕಳೆದುಕೊಂಡವನು ಅದನ್ನು [ಶಾಶ್ವತ ಜೀವ] ಕಂಡುಕೊಳ್ಳುವನು" (ಮತ್ತಾಯ 10:34-39).

ನಮ್ಮ ಪ್ರಾಣವನ್ನು, ಅಥವಾ ಲೌಕಿಕ ಬದುಕನ್ನು ನಾವು ಕಳೆದುಕೊಳ್ಳುವುದು ಹೇಗೆಂದರೆ ನಾವು ಬಹಳ ಆಧ್ಯಾತ್ಮಿಕವಾದಾಗ ಮತ್ತು ಪ್ರಭುವಿನ ಆತ್ಮದಲ್ಲಿ ಎಷ್ಟರ ಮಟ್ಟಿಗೆ ಬದುಕುತ್ತೇವೆ ಎಂದರೆ ನಮ್ಮ ಪ್ರಾಣ ಅಥವಾ ಲೌಕಿಕ ಬದುಕು ಕೇವಲ ಪವಿತ್ರಾತ್ಮನನ್ನು ಮಾತ್ರ ಹೀರಿಕೊಳ್ಳುತ್ತದೆ, ಈ ರೀತಿ ನಮ್ಮ ಪ್ರಾಣ ಅಥವಾ ಲೌಕಿಕ ಬದುಕು ಸಂಪೂರ್ಣವಾಗಿ ದೇವರಿಂದ ತುಂಬಿಹೋಗುತ್ತದೆ, ದೇವರಿಂದ ನುಂಗಲ್ಪಡುತ್ತದೆ. ನಮ್ಮ ಸಂಪೂರ್ಣ ಪ್ರಾಣದೊಂದಿಗೆ ನಮ್ಮ ದೇವರಾದ ಕರ್ತನನ್ನು ಪ್ರೀತಿಸುವುದು ಎಂದರೆ ಇದೇ. ನಮ್ಮ ಪ್ರಾಣವನ್ನು ಅಥವಾ ಲೌಕಿಕ ಬದುಕನ್ನು ದೇವರ ಆತ್ಮನು ಸಂಪೂರ್ಣವಾಗಿ ಆಕ್ರಮಿಸಿಕೊಂಡಾಗ ಅಥವಾ ಸ್ವಾಧೀನ ಪಡಿಸಿಕೊಂಡಾಗ ಹೀಗಾಗುತ್ತದೆ. ಹೀಗಾದಾಗ, ಎಫೆಸದವರಿಗೆ, ಅಧ್ಯಾಯ 4, ಶ್ಲೋಕ 11-13ರಲ್ಲಿರುವ ಪವಿತ್ರ ಲೇಖನವನ್ನು ನೆರವೇರಿಸಲು ನಾವು ಪ್ರಭುವಿಗೆ ಅವಕಾಶ ನೀಡಿದಂತಾಗುತ್ತದೆ. ಅದು ನಮಗೆ ಹೇಳುವುದೇನೆಂದರೆ, "ಕೆಲವರನ್ನು ಅಪೋಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ನಾವೆಲ್ಲರೂ ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು." ಪುನಃ, ಇದು ನಿಮ್ಮ ದೇವರಾದ ಕರ್ತನನ್ನು ನಿಮ್ಮ ಸಂಪೂರ್ಣ ಹೃದಯ ಮತ್ತು ಸಂಪೂರ್ಣ ಪ್ರಾಣದೊಂದಿಗೆ ಪ್ರೀತಿಸುವುದಾಗಿದೆ.

ಈಗ, ನಮ್ಮ ದೇವರಾದ ಕರ್ತನನ್ನು ಸಂಪೂರ್ಣ ಮನಸ್ಸಿನಿಂದ ಪ್ರೀತಿಸುವುದರ ಬಗ್ಗೆ 1 ಕೊರಿಂಥದವರಿಗೆ 2:15-16 ಹೀಗೆಂದು ಹೇಳುತ್ತದೆ, "ದೇವರಾತ್ಮನಿಂದ ನಡೆಸಿಕೊಳ್ಳುವವನೋ ಎಲ್ಲವನ್ನೂ ವಿಚಾರಿಸಿ ತಿಳಿದುಕೊಳ್ಳುತ್ತಾನೆ; ಆದರೆ ಇವನನ್ನು ಯಾವನಾದರೂ ವಿಚಾರಿಸಿ ತಿಳಿದುಕೊಳ್ಳುವುದಿಲ್ಲ. ಕರ್ತನ ಮನಸ್ಸನ್ನು ತಿಳಿದುಕೊಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದಿದೆಯಲ್ಲಾ. ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು." ಎಫೆಸದವರಿಗೆ 4:3-7 ಹೀಗೆನ್ನುತ್ತದೆ, "ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ. ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು [ವಾಸ್ತವದಲ್ಲಿ, ಕ್ರಿಸ್ತನ ಮನಸ್ಸನ್ನು ಹೊಂದಿರುವುದು ಎಂದರ್ಥ] ಪವಿತ್ರಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಿ. ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು. ಒಬ್ಬನೇ ಆತ್ಮನನ್ನು ಹೊಂದಿದವರು. ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು [ತ್ರಿಯೇಕ ದೇವರು, ಆತನ ದೇವದೂತರು, ಮತ್ತು ವಿಮೋಚನೆಗೊಂಡಿರುವ ಎಲ್ಲರೊಂದಿಗೆ ಪರಲೋಕದಲ್ಲಿ ನಿರಂತರವಾಗಿ ಬದುಕುವುದು ಎಂದರ್ಥ]; ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ, ಭರವಸೆಯು ಒಂದೇ, ಸ್ನಾನದೀಕ್ಷೆ ಒಂದೇ. ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ; ಆತನು ಎಲ್ಲರ ಮೇಲಿರುವವನೂ ಎಲ್ಲರ ಮುಖಾಂತರ ಕಾರ್ಯ ನಡೆಸುವವನೂ ಎಲ್ಲರಲ್ಲಿ ವಾಸಿಸುವವನೂ ಆಗಿದ್ದಾನೆ. ಆದರೆ ಕ್ರಿಸ್ತನು ನಮ್ಮಲ್ಲಿ ಒಬ್ಬೊಬ್ಬನಿಗೆ ಅನುಗ್ರಹಿಸಿದ ಪ್ರಕಾರವೇ ಅವರವರಿಗೆ ಕೃಪಾವರವು ದೊರಕಿದೆ."

ಮನುಷ್ಯರು ನೂತನ (ರೋಮಾಪುರದವರಿಗೆ 12:2) ಮತ್ತು ಪರಿಶುದ್ಧ(2 ಪೇತ್ರನು 3:1) ಮನಸ್ಸುಗಳನ್ನು ಹೊಂದಿರಬಹುದು. ಅವರು ಪೂರ್ಣ ಮನಸ್ಸಿನಿಂದ ದೇವರನ್ನು ಪ್ರೀತಿಸಬಹುದು (ಮತ್ತಾಯ 22:37, ಮಾರ್ಕ 12:30, ಲೂಕ 10:27). (ಅವರು ಅದರ ಬಗ್ಗೆ ಮಾತ್ರ ಆಲೋಚಿಸುತ್ತಾರೆ. ಅವರು ಎಡೆಯಿಲ್ಲದೆ ಪ್ರಾರ್ಥಿಸುತ್ತಾರೆ, ಯಾವಾಗಲೂ.[15]) ಅವರ ಮನಸ್ಸುಗಳಲ್ಲಿ ದೇವರ ಆಜ್ಞೆಗಳು ಬರೆಯಲ್ಪಟ್ಟಿವೆ (ಇಬ್ರಿಯರಿಗೆ 8:10). ಕ್ರೈಸ್ತಮತೀಯರಾದ ನಾವು "ಕ್ರಿಸ್ತರ ಮನಸ್ಸನ್ನು" (1 ಕೊರಿಂಥದವರಿಗೆ 2:16) ಹೊಂದಿರುವ ಕಾರಣ ನಾವು ಮನಸ್ಸಿನಲ್ಲಿ ಐಕ್ಯವಾಗಿರಬೇಕು ಎಂದು ನಮಗೆ ಆದೇಶಿಸಲಾಗಿದೆ (ರೋಮಾಪುರದವರಿಗೆ 12:16, 1 ಪೇತ್ರನು 3:8).

ನಮ್ಮ ಸಂಪೂರ್ಣ ಶಕ್ತಿಯೊಂದಿಗೆ ನಮ್ಮ ದೇವರಾದ ಕರ್ತನನ್ನು ಪ್ರೀತಿಸುವುದು ಎಂದರೆ ಕಾಲವನ್ನು ವಿಮೋಚನೆಗೊಳಿಸುವುದು. ಎಫೆಸದವರಿಗೆ 5:1-16 ಹೀಗೆಂದು ಹೇಳುತ್ತದೆ, "ಆದ್ದರಿಂದ ದೇವರ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿಸುವವರಾಗಿರಿ. ಕ್ರಿಸ್ತನು ನಿಮ್ಮನ್ನು ಪ್ರೀತಿಸಿ ನಮ್ಮೆಲ್ಲರಿಗೋಸ್ಕರ ತನ್ನನ್ನೇ ದೇವರಿಗೆ ಸುಗಂಧವಾಸನೆಯಾದ ಕಾಣಿಕೆಯಾಗಿಯೂ [ಯಜ್ಞವೇದಿಯಾದ ನಿಮ್ಮ ಹೃದಯದಿಂದ ದೇವರ ವರೆಗೆ] ಯಜ್ಞವಾಗಿಯೂ ಸಮರ್ಪಿಸಿಕೊಂಡ ಪ್ರಕಾರ ನೀವೂ ಪ್ರೀತಿಯಲ್ಲಿ ನಡೆದುಕೊಳ್ಳಿರಿ. ಜಾರತ್ವ

**15** ಕೀರ್ತನೆಗಳು 34:1, ಮತ್ತಾಯ 26:41, ಲೂಕ 18:1, 21:36, 22:40, 46, ಅಪೋಸ್ತಲರ ಕೃತ್ಯಗಳು 6:4, ರೋಮಾಪುರದವರಿಗೆ 12:12, ಎಫೆಸದವರಿಗೆ 6:17-18, ಫಿಲಿಪ್ಪಿಯವರಿಗೆ 4:6, ಕೊಲೊಸ್ಸೆಯವರಿಗೆ 4:2, 1 ಥೆಸಲೋನಿಕದವರಿಗೆ 5:17, 1 ತಿಮೊಥೆಯನಿಗೆ 2:8, ಯಾಕೋಬನು 5:16, 1 ಪೇತ್ರನು 4:7

**11** ಮತ್ತಾಯ 6:22-24, ಲೂಕ 9:23-25, ಯೋಹಾನನು 6:63, ರೋಮಾಪುರದವರಿಗೆ 6:1-13, 7:4-6, 8:1-14, 13:12, 1 ಕೊರಿಂಥದವರಿಗೆ 10:21, 2 ಕೊರಿಂಥದವರಿಗೆ 6:14-18, ಯಾಕೋಬನು 4:4, 7-8, 1 Pet. 2:9 **12** ಯೋಹಾನನು 3:3-8, 14:23-26, 15:26-27, ಅಪೋಸ್ತಲರ ಕೃತ್ಯಗಳು 1:1-8, 2:1-18, 38-39 **13** ಯೆಹೆಜ್ಕೇಲನು 36:27, ಯೋಹಾನನು 14:15-21, 23, 26, 15:4-5, ರೋಮಾಪುರದವರಿಗೆ 8:10-11, 1 ಕೊರಿಂಥದವರಿಗೆ 3:9, 16, ಗಲಾತ್ಯದವರಿಗೆ 2:20, ಎಫೆಸದವರಿಗೆ 3:16-21, ಫಿಲಿಪ್ಪಿಯವರಿಗೆ 4:13, ಕೊಲೊಸ್ಸೆಯವರಿಗೆ 1:27-29, 2 ತಿಮೊಥೆಯನಿಗೆ 1:14, 1 ಯೋಹಾನನು 4:4 **14** ಎಫೆಸದವರಿಗೆ 6:17, ಇಬ್ರಿಯರಿಗೆ 4:12, ಪ್ರಕಟನೆ 1:16, 2:12, 16, 19:13-15

## ಎಲ್ ಸಾಲ್ವಡಾರ್

*(ಸ್ಪ್ಯಾನಿಷ್ ಭಾಷೆಯಿಂದ ಅನುವಾದಿಸಲಾಗಿದೆ)*

ಕ್ರಿಸ್ತ ಯೇಸುವಿನಲ್ಲಿ ಪ್ರಿಯ ಸಹೋದರರೇ,

ನಾವು ನಿಮಗಾಗಿ ಮತ್ತು ನಿಮ್ಮ ಮಿನಿಸ್ಟ್ರಿಗಾಗಿ ಪ್ರಾರ್ಥಿಸುತ್ತಿರುವುದರಿಂದ ನಮ್ಮನ್ನು ಜ್ಞಾಪಿಸಿಕೊಂಡಿದ್ದಕ್ಕಾಗಿ ನಿಮಗೆ ಧನ್ಯವಾದಗಳು. ನಮ್ಮನ್ನು ಉತ್ತಮಗೊಳಿಸಿಕೊಳ್ಳಲು ನೆರವಾಗುತ್ತಿರುವುದಕ್ಕೆ ಮತ್ತು ಕ್ರಿಸ್ತರಲ್ಲಿ ಎಲ್ಲಾ ಸಾಹಿತ್ಯದೊಂದಿಗೆ ಹೆಚ್ಚು ಜನರನ್ನು ತಲುಪಲು ಸಮರ್ಥರಾಗಲು ನೆರವಾಗುತ್ತಿರುವುದಕ್ಕೆ ನಿಮಗೆ ಧನ್ಯವಾದಗಳು. ನನಗೆ ಹೆಚ್ಚು ಬೈಬಲ್ಲುಗಳನ್ನು ಮತ್ತು ಹೆಚ್ಚು ಸಾಹಿತ್ಯವನ್ನು ಕಳುಹಿಸುವುದನ್ನು ಮುಂದುವರಿಸಲು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ, ಏಕೆಂದರೆ ಹೆಚ್ಚು ಜನರನ್ನು ಮತಾಂತರಗೊಳಿಸಲು ಮತ್ತು ಕ್ರಿಸ್ತರ ಪಾದ ಸೇರಲು ಅವರನ್ನು ಪ್ರೋತ್ಸಾಹಿಸಲು ನಾವು ಅವುಗಳನ್ನು ಬಳಸುತ್ತೇವೆ.

ಪ್ರಿಯರಿಗೆ ಅನುಗ್ರಹಗಳು.

ಕ್ಸೇವಿಯರ್ ಕ್ಯಾಂಪೊಸ್

ಸ್ಯಾನ್ ಸಾಲ್ವಡಾರ್, ಎಲ್ ಸಾಲ್ವಡಾರ್

ಯಾವ ವಿಧವಾದ ಭಂಡತನ ಹಾಗೂ ದ್ರವ್ಯದ ಆಸೆ ಇವುಗಳ ವಿಷಯವೂ ನಿಮ್ಮಲ್ಲಿ ಇರಬಾರದು; ಇವುಗಳಿಗೆ ದೂರವಾಗಿರುವುದೇ ದೇವಜನರಿಗೆ ಯೋಗ್ಯವಾದದ್ದು. ಹೊಲಸುತನ, ಹುಚ್ಚುತನ, ಕುಚೋದ್ಯದ ಮಾತುಗಳು ಬೇಡ, ಇವೆಲ್ಲವೂ ಅಯೋಗ್ಯವಾದವು; ಇವುಗಳನ್ನು ಬಿಟ್ಟು ದೇವರ ಉಪಕಾರಸ್ತುತಿ ಮಾಡುವುದು ಉತ್ತಮ. ಜಾರರು, ದುರಾಚಾರಿಗಳು, ವಿಗ್ರಹಾರಾಧಕರಂತಿರುವ ಲೋಭಿಗಳು ಇವರಲ್ಲಿ ಒಬ್ಬರಿಗಾದರೂ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯತೆ ಇಲ್ಲವೇ ಇಲ್ಲವೆಂದು ನೀವು ಚೆನ್ನಾಗಿ ಬಲ್ಲಿರಲ್ಲವೇ? ಹುರುಳಿಲ್ಲದ ಮಾತುಗಳನ್ನಾಡುವವರಿಗೆ ಕಿವಿಗೊಟ್ಟು ಮೋಸಹೋಗಬೇಡಿರಿ; ಅಂಥ ಕೃತ್ಯಗಳ ಕಾರಣದಿಂದ ದೇವರ ಕೋಪವು ಆತನಿಗೆ ಅವಿಧೇಯರಾಗಿರುವವರ ಮೇಲೆ ಬರುತ್ತದೆ. ನೀವು ಅವರೊಂದಿಗೆ ಪಾಲುಗಾರರಾಗಿರಬೇಡಿ. ನೀವು ಹಿಂದಿನ ಕಾಲದಲ್ಲಿ ಕತ್ತಲೆಯಲ್ಲಿದ್ದಿರಿ, ಆದರೆ ಈಗ ನೀವು ಕ್ರಿಸ್ತರಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ. ಬೆಳಕಿನ ಫಲವು ಉಪಕಾರದಲ್ಲಿಯೂ ನೀತಿಯಲ್ಲಿಯೂ ಸತ್ಯದಲ್ಲಿಯೂ ಕಾಣಿಸಿಕೊಳ್ಳುತ್ತದೆ. ಕರ್ತನಿಗೆ ಮೆಚ್ಚಿಗೆಯಾಗಿರುವುದು ಏನೆಂಬುದನ್ನು ಪರಿಶೋಧಿಸಿ ತಿಳಿದುಕೊಳ್ಳಿರಿ. ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬಯಲಿಗೆ ತಂದು ಖಂಡಿಸಿರಿ. ಆ ಜನರು ರಹಸ್ಯವಾಗಿ ನಡೆಸುವ ಕೆಲಸಗಳ ಕುರಿತು ಮಾತನಾಡುವುದಾದರೂ ನಾಚಿಕೆಗೆ ಕಾರಣವಾಗಿದೆ. ಬೆಳಕಿನಿಂದ ಎಲ್ಲಾ ಕೃತ್ಯಗಳ ನಿಜಗುಣ ತೋರಿಬರುತ್ತದೆ; ಅದರಿಂದ ಕೆಟ್ಟದ್ದು ಕೆಟ್ಟದ್ದೇ ಎಂಬಂತೆ ಕಾಣಿಸುವುದು. ಪ್ರಕಟವಾಗಿರುವುದೆಲ್ಲಾ ಬೆಳಕಿಗೆ ಸಂಬಂಧಿಸಿರುವುದು. ಆದ್ದರಿಂದ - ನಿದ್ರೆ ಮಾಡುವವನೇ, ಎಚ್ಚರವಾಗು! ಸತ್ತವರನ್ನು ಬಿಟ್ಟು ಏಳು! ಕ್ರಿಸ್ತನು ನಿನಗೆ ಪ್ರಕಾಶ ಕೊಡುವನು ಎಂದು ಹೇಳಲಾಗಿದೆ. ಆದಕಾರಣ ನೀವು ನಡೆದುಕೊಳ್ಳಬೇಕಾದ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ. ಜ್ಞಾನವಿಲ್ಲದವರಾಗಿರದೆ ಜ್ಞಾನವಂತರಾಗಿರಿ. ಈ ದಿನಗಳು ಕೆಟ್ಟ ದಿನಗಳಾಗಿವೆ; ಆದ್ದರಿಂದ ಕಾಲವನ್ನು ಸುಮ್ಮನೆ ವ್ಯರ್ಥಮಾಡದೇ ಅದನ್ನು ಅಮೂಲ್ಯವೆಂಬಂತೆ ಉಪಯೋಗಿಸಿಕೊಳ್ಳಿರಿ."

ನಮ್ಮ ಸಂಪೂರ್ಣ ಹೃದಯ, ಸಂಪೂರ್ಣ ಆತ್ಮ, ಸಂಪೂರ್ಣ ಮನಸ್ಸು, ಮತ್ತು ಸಂಪೂರ್ಣ ಶಕ್ತಿಯೊಂದಿಗೆ ನಮ್ಮ ಪ್ರಭುವಿನ ಸೇವೆಯನ್ನು ಹೇಗೆ ಮಾಡಬೇಕೆಂಬುದರ ಒಂದು ಸಂಕ್ಷಿಪ್ತ ಸಾರಾಂಶವಿದೆ. ನೀವು ನಿಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಶಕ್ತಿಯೊಂದಿಗೆ ನಿಮ್ಮ ದೇವರಾದ ಕರ್ತನನ್ನು ಪ್ರೀತಿಸಬೇಕಾಗಿಲ್ಲ ಎಂದು ಇಂದು ಹಲವಾರು ಚರ್ಚುಗಳು ಮತ್ತು ಚರ್ಚುಗಳ ಹೊರಗಿರುವ ಹಲವಾರು ಜನರು ನಿಮಗೆ ಹೇಳುತ್ತಾರೆ. ಅವರು ಸುಳ್ಳುಗಾರರು. ಅವರು, ಕೇವಲ ಮತ್ತಾಯ ಅಧ್ಯಾಯ ಇಪ್ಪತ್ತನಾಲ್ಕರಲ್ಲೇ ಐದು ಬಾರಿ ಯೇಸು ನಮಗೆ ಎಚ್ಚರಿಕೆ ನೀಡಿದ ಸುಳ್ಳು ಪ್ರವಾದಿಗಳಾಗಿದ್ದಾರೆ. ಆತನ ಎಚ್ಚರಿಕೆಗಳು ನಮಗಾಗಿಯೇ ಇವೆ.

ಭೂಮಿಯ ಮೇಲಿರುವ ಎಲ್ಲವೂ ಬಹುಮಟ್ಟಿಗೆ ಸುಳ್ಳು. ಭೂಮಿಯು ಕೇವಲ 6,000 ವರ್ಷ ಹಳೆಯದು. ನೀವು ಒಂದು ಕಾರ್ಬನ್ ಯಂತ್ರವನ್ನು ನಂಬುತ್ತೀರಾ, ಅಥವಾ ದೇವರನ್ನು ನಂಬುತ್ತೀರಾ? ಲೋಟನ ಹೆಂಡತಿಯನ್ನು ಉಪ್ಪಿನ ಸ್ತಂಭವನ್ನಾಗಿ

*(ಪುಟ 8ರಲ್ಲಿ ಮುಂದುವರಿದಿದೆ)*

## ಘಾನಾ

ಕ್ರಿಸ್ತರಲ್ಲಿ ಪ್ರಿಯರಾದವರೇ,

ಅನುಗ್ರಹಿತರಾದ ನಿಮಗೆ ಪರಿಶುದ್ಧ ನಮಸ್ಕಾರಗಳು, ಮತ್ತು ಸರ್ವಶಕ್ತನಾದ ಪ್ರಭುವಿನ ಕೆಲಸಕ್ಕಾಗಿ ಇನ್ನೂ ಹೆಚ್ಚು ಆತ್ಮಗಳನ್ನು ಗೆಲ್ಲುವುದನ್ನು ನೀವು ಮುಂದುವರಿಸಿರಿ ಎಂದು ಆಶಿಸುತ್ತೇನೆ. ಪ್ಯಾಸ್ಟರ್, ನಾನು 24 ವರ್ಷ ವಯಸ್ಸಿನ ಘಾನಾದ ಒಬ್ಬ ತರುಣ, ಮತ್ತು ಹಿರಿಯ ಸೆಕೆಂಡರಿ ಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದೇನೆ. ನಾನು ಹಿಂದೆ ಚರ್ಚಿಗೆ ಹೋಗಿದ್ದೆ, ಆದರೆ ಕೆಲವು ವರ್ಷಗಳ ವರೆಗೆ ಯಕ್ಷಿಣಿವಿದ್ಯೆಯನ್ನು ಸೇರಲು ಸೈತಾನನು ನನ್ನನ್ನು ನಿಯಂತ್ರಿಸಿದ್ದನು. ಒಂದು ಉಪನ್ಯಾಸದ ಭವನದಲ್ಲಿ ಒಬ್ಬ ನಿಜವಾದ ಪರೋಪಕಾರಿಯು ದೇವರ ಮೂರು ಸುದ್ದಿಪತ್ರಿಕೆಗಳನ್ನು ನನಗೆ ಕೊಟ್ಟಾಗ ನನ್ನ ರಕ್ಷಣೆಯ ದಿನ ಬಂದಿತು. ಅವುಗಳನ್ನು ಓದಲು ಉಪನ್ಯಾಸ ಮುಗಿಯುವವರೆಗೆ ಕಾಯಲು ನನ್ನಿಂದ ಸಾಧ್ಯವಾಗಲಿಲ್ಲ. ನಿಜ ಹೇಳಬೇಕೆಂದರೆ, ಆ ಪರೋಪಕಾರಿಗಾಗಿ ಪ್ರಭುವು ಮಾಡಿದ ಅದ್ಭುತ ಕಾರ್ಯಗಳ ಬಗ್ಗೆ, ಮತ್ತು ನೀವು ಒದಗಿಸಿದ ಬೋಧನೆಗಳನ್ನು ನಾನು ಓದಿದಾಗ, ಪವಿತ್ರಾತ್ಮನು ನನ್ನ ಮನಮುಟ್ಟಿದರು.

ಪ್ರಭುವಿನ ಮಹಿಮೆಗಾಗಿ ನಾನು ಇದನ್ನು ಹೇಳುತ್ತಿದ್ದೇನೆ, ನಾನು ಈಗ ಒಬ್ಬ ಸಂಪೂರ್ಣವಾಗಿ ಮತಾಂತರಗೊಂಡವನು, ಒಬ್ಬ ಕ್ರೈಸ್ತಮತೀಯನು, ಮತ್ತು ಕೇವಲ ನಾನು ಮಾತ್ರ ಅಲ್ಲ, ನಾನು ಮತ್ತು ಯಕ್ಷಿಣಿ ವಿದ್ಯೆಯಲ್ಲಿ ನನ್ನೊಂದಿಗಿದ್ದ, ಪುರುಸೊತ್ತಿನ ದೇವರುಗಳಿಗಾಗಿ ಬಿಡುವಿಲ್ಲದಿದ್ದ, ಆದರೆ ಈಗ ದೇವರ ಪದದ ಬಗ್ಗೆ ಹಲವಾರು ಜನರಿಗೆ, ವಿಶೇಷವಾಗಿ ನನ್ನ ಕುಟುಂಬಕ್ಕೆ, ಬೋಧಿಸುವ ನನ್ನ 10 ಗೆಳೆಯರು ಕೂಡ ಮತಾಂತರಗೊಂಡಿದ್ದೇವೆ. ದೇವರುಗಳ ರೂಪದಲ್ಲಿ ಮರದ ಕೆತ್ತನೆಗಳನ್ನು ಹೊಂದಿದ್ದ ನನ್ನ ತಂದೆಯವರು ಅವೆಲ್ಲವನ್ನೂ ಸುಟ್ಟಿದ್ದಾರೆ, ಮತ್ತು ನನ್ನ ತಾಯಿ ಸಂಪೂರ್ಣ ಕುಟುಂಬದ 10 ಸದಸ್ಯರೊಂದಿಗೆ ಈಗ ಕ್ರೈಸ್ತಮತೀಯರಾಗಿದ್ದಾರೆ.

ಈಗ ನನ್ನ ಬದುಕಿನಲ್ಲಿ ಸಂಪೂರ್ಣ ಬದಲಾವಣೆಯಾಗಿದೆ ಮತ್ತು ನಾನು ಈಗ ಪ್ರಭುವನ್ನು ಶ್ರದ್ಧೆಯಿಂದ ನಂಬುತ್ತೇನೆ. ಪ್ರಭು ನನ್ನನ್ನು ತನ್ನ ದೂತನಾಗಿ ಬಳಸಬೇಕೆಂದಿದ್ದಾರೆ ಎಂದು ನನಗನಿಸುತ್ತದೆ, ಮತ್ತು ಆ ದೃಷ್ಟಿಯಿಂದ ನಾನು ಅಕೌಂಟಿಂಗ್ ಓದುವುದನ್ನೂ ನಿಲ್ಲಿಸಿ ಪ್ರಭುವಿನ ಸೇವೆ ಮಾಡಲು ಬಯಸುತ್ತೇನೆ. ಸದ್ಯ, ನಾನು ಮತ್ತು ನನ್ನ ಕುಟುಂಬ ಮತ್ತು ನನ್ನ ಗೆಳೆಯರು, ನಮ್ಮ ಬಳಿ ಸುದ್ದಿಪತ್ರಿಕೆಗಳ ಹೊರತು ಬೈಬಲ್ ಆಗಲಿ ದೇವರ ಪದವನ್ನು ತಿಳಿದುಕೊಳ್ಳಲು ನಮಗೆ ನೆರವಾಗಬಹುದಾದಂಥ ಇನ್ಯಾವುದೇ ಆಗಲಿ ಇಲ್ಲ. ನಮ್ಮಲ್ಲಿ ಪ್ರಚಂಡ ಪ್ರಶ್ನೆಗಳಿವೆ, ಉದಾಹರಣೆಗೆ, "ದೇವರಿಲ್ಲದೆ ನಾವು ಒಳ್ಳೆಯವರಾಗಿರಬಹುದೆ?" ಮತ್ತು "ಇಲ್ಲಿಂದ ಎಲ್ಲಿಗೆ ಹೋಗುವುದು?"

ನಾನು ಮತ್ತು ನನ್ನ ಕುಟುಂಬ ಅದನ್ನು ಓದುತ್ತೇವೆ, ಆದ್ದರಿಂದ ದಯವಿಟ್ಟು ನಮಗೆ ಕೆಲವು ಬೈಬಲ್ಲುಗಳನ್ನು ಮತ್ತು ದೇವರ ಪದದ ಬಗ್ಗೆ ತಿಳಿದುಕೊಳ್ಳಲು ಯಾವುದೇ ಕೆಲವು ಸುದ್ದಿಪತ್ರಿಕೆಗಳನ್ನು ಕಳುಹಿಸಿ. ಸದ್ಯ, ಪ್ರಭುವಿನ ಕೆಲಸವನ್ನು ಈಡೇರಿಸಲು ನಾನು ನಿಮ್ಮ ನೆರವು ಮತ್ತು ಮಾರ್ಗದರ್ಶನವನ್ನು ಬಯಸುತ್ತೇನೆ.

ಧನ್ಯವಾದಗಳು.

ಕ್ರಿಸ್ತರಲ್ಲಿ ನಿಮ್ಮ,

ನಾನಾ ಕೂಫ                                        ಕುಮಾಸಿ, ಆಶ್-ಟೌನ್, ಘಾನಾ

## ಓಕ್ಲಹಾಮಾ

ಕ್ರಿಸ್ತ ಯೇಸುವಿನಲ್ಲಿ ನನ್ನ ಸಹೋದರರಿಗೆ ಮತ್ತು ಸಹೋದರಿಯರಿಗೆ ನಮಸ್ಕಾರ!

ನಾನು ಪ್ಯಾಸ್ಟರ್ ಅಲಾಮೊಗಾಗಿ ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. "ಲೋಕವು ನಿಮ್ಮ ಮೇಲೆ ದ್ವೇಷ ಮಾಡುವುದಾದರೆ ಅದು ಮೊದಲು ನನ್ನ ಮೇಲೆ ದ್ವೇಷ ಮಾಡಿತೆಂದು ತಿಳಿದುಕೊಳ್ಳಿರಿ. ನೀವು ಲೋಕದ ಕಡೆಯವರಾಗಿರುತ್ತಿದ್ದರೆ ಲೋಕವು ನಿಮ್ಮ ಮೇಲೆ ತನ್ನವರೆಂದು ಮಮತೆ ಇಡುತ್ತಿತ್ತು; ಆದರೆ ನೀವು ಲೋಕದ ಕಡೆಯವರಲ್ಲದೆ ಇರುವುದರಿಂದಲೂ ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿ ತೆಗೆದುಕೊಂಡಿರುವುದರಿಂದಲೂ ಲೋಕವು ನಿಮ್ಮನ್ನು ದ್ವೇಷಿಸುತ್ತದೆ. ದಣಿಗಿಂತ ಆಳು ದೊಡ್ಡವನಲ್ಲವೆಂಬುದಾಗಿ ನಾನು ನಿಮಗೆ ಹೇಳಿದ ಮಾತನ್ನು ನೆನಪಿಸಿಕೊಳ್ಳಿರಿ. ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆಪಡಿಸುವರು; ಅವರು ನನ್ನ ಮಾತನ್ನು ಪಾಲಿಸುತ್ತ ನಡೆದರೆ ನಿಮ್ಮ ಮಾತನ್ನು ಸಹ ಪಾಲಿಸುತ್ತ ನಡೆಯುವರು" ಎಂದು ಯೇಸು ಹೇಳಿದರು.

ನಿಮ್ಮ ಚರ್ಚಿಗಾಗಿ, ನಿಮ್ಮ ದೇಹಕ್ಕಾಗಿ, ಯೇಸುವೇ, ಧನ್ಯವಾದಗಳು.

ಪ್ರಭುವಿನ ಸ್ತುತಿ ಮಾಡಿ!

ಫ್ರೆಡ್ ಶಾಫರ್                                        ಓಕ್ಲಹಾಮ

# ಮನುಷ್ಯ ಬೇಟೆ ಕೂಟಗಳಲ್ಲಿ ಐರೋಪ್ಯ ರಾಜಮನೆತನದವರು ಮೋಜಿಗಾಗಿ ಬೆತ್ತಲೆ ಮಕ್ಕಳನ್ನು ಕೊಲ್ಲುತ್ತಿದ್ದಾರೆಯೆ?

ಮಂಗಳವಾರ, ಜೂನ್ 17, 2014, 7:29

http://beforeitsnews.com/celebrities/2014/06/european-royals-killing-naked-children-for-fun-at-human-hunting-parties-2465154.html




*ಬ್ರುಸೆಲ್ಸ್ ನಗರದಲ್ಲಿರುವ ಇಂಟರ್ನ್ಯಾಷನಲ್ ಕಾಮನ್ ಲಾ ಕೋರ್ಟ್ ಆಫ್ ಜಸ್ಟಿಸ್ ಎದುರು ಸಾಕ್ಷಿಗಳ ಪುರಾವೆಯಿಂದ ತೆಗೆದುಕೊಳ್ಳಲಾದ ಲೇಖನಗಳ ಸರಣಿಯಲ್ಲಿ ಇದು ಒಂದು. ಐವರು ಅಂತಾರಾಷ್ಟ್ರೀಯ ನ್ಯಾಯಾಧೀಶರು, ನೈನ್ತ್ ಸರ್ಕಲ್ ಸಟ್ಯಾನಿಕ್ ಚೈಲ್ಡ್ ಸ್ಯಾಕ್ರಿಫೈಸ್ ಕಲ್ಟ್ ಜಾಲದ ಜಾಗತಿಕ ಗಣ್ಯ ಸದಸ್ಯರು ಮಾಡಿದ್ದಾರೆ ಎಂದು ಹೇಳಲಾಗುತ್ತಿರುವ ಮಕ್ಕಳ ಬಲಾತ್ಕಾರ, ಚಿತ್ರಹಿಂಸೆ, ಕೊಲೆ ಮತ್ತು ಅಪಹರಣಗಳ ಸಾಕ್ಷ್ಯವನ್ನು ಪರೀಕ್ಷಿಸುತ್ತಿದ್ದಾರೆ. ನಿಯತ ನೈನ್ತ್ ಸರ್ಕಲ್ ಮಕ್ಕಳ ಬಲಿಗಳನ್ನು ಕ್ಯಾಥೊಲಿಕ್ ಕ್ಯಾಥೆಡ್ರಲ್ಲುಗಳು ಸುರಂಗ ಸಮಾಧಿಗಳಲ್ಲಿ, ವ್ಯಾಟಿಕನ್ ನಲ್ಲಿ, ಖಾಸಗಿ ಎಸ್ಟೇಟುಗಳಲ್ಲಿ ಮತ್ತು ತೋಪುಗಳಲ್ಲಿ ಮತ್ತು ಬೆಲ್ಜಿಯಂ, ಹಾಲೆಂಡ್, ಸ್ಪೇನ್, ಆಸ್ಟ್ರೇಲಿಯ, ಐರ್ಲ್ಯಾಂಡ್, ಫ್ರಾನ್ಸ್, ಇಂಗ್ಲೆಂಡ್ ಮತ್ತು ಯು.ಎಸ್.ಗಳಲ್ಲಿ ಸರ್ಕಾರಿ ಸೈನಿಕ ನೆಲೆಗಳಲ್ಲಿ ನಡೆಸಲಾಗುತ್ತದೆ ಎಂದು ಹೇಳಿತ್ತು. ಐರ್ಲ್ಯಾಂಡ್, ಸ್ಪೇನ್ ಮತ್ತು ಕೆನಡಾಗಳಲ್ಲಿ ಕನಿಷ್ಠ 34 ಮಕ್ಕಳ ಸಾಮೂಹಿಕ ಸಮಾಧಿ ತಾಣಗಳನ್ನು ಗುರುತಿಸಲಾಯಿತು - ಮತ್ತು ಆಯಾ ಸರ್ಕಾರಗಳು, ಇಂಗ್ಲೆಂಡಿನ ರಾಣಿ ಮತ್ತು ಕ್ಯಾಥೊಲಿಕ್ ಚರ್ಚ್ ಉತ್ಖನನವನ್ನು ನಿರಾಕರಿಸಿದವು. ನೈನ್ತ್ ಸರ್ಕಲ್ ಚಟುವಟಿಕೆಗಳಲ್ಲಿ ಪೋಪ್ ಫ್ರಾನ್ಸಿಸ್, ಮಾಜಿ ಪೋಪ್ ರಾಟ್ಜಿಂಗರ್; ಕಾರ್ಡಿನಲ್ ಗಳು ಸೇರಿದಂತೆ ಆಂಗ್ಲಿಕನ್, ಯುನೈಟೆಡ್ ಚರ್ಚ್ ಆಫ್ ಕೆನಡಾ ಮತ್ತು ಕ್ಯಾಥೊಲಿಕ್ ಚರ್ಚ್ ಅಧಿಕಾರಿಗಳು, ರಾಣಿ ಎಲಿಜಬೆತ್ ಮತ್ತು ರಾಜಕುಮಾರ ಫಿಲಿಪ್ ಸೇರಿದಂತೆ ಐರೋಪ್ಯ ರಾಜಮನೆತನದ ಸದಸ್ಯರು, ಯುಎಸ್ಎ ನ ಸಿಐಎ ಸೇರಿದಂತೆ ಕೆನಡಾದ, ಆಸ್ಟ್ರೇಲಿಯ, ಯುಕೆ ಮತ್ತು ಯುಎಸ್ ಗಳ ಸೈನ್ಯ ಮತ್ತು ಸರ್ಕಾರಿ ಅಧಿಕಾರಿಗಳು, ಜೊತೆಗೆ ಯುಎಸ್, ಬೆಲ್ಜಿಯಂ, ಹಾಲೆಂಡ್, ಕೆನಡಾ, ಆಸ್ಟ್ರೇಲಿಯ, ಫ್ರಾನ್ಸ್, ಐರ್ಲ್ಯಾಂಡ್ ಮತ್ತು ಯುಕೆಗಳಿಂದ ಪ್ರಮುಖ ಸರ್ಕಾರಿ ಮಂತ್ರಿಗಳು, ನ್ಯಾಯಾಧೀಶರು, ರಾಜಕಾರಣಿಗಳು ಮತ್ತು ವ್ಯಾಪಾರಿಗಳು ಹಾಜರಿದ್ದರು ಎಂದು ಹೆಸರಿಸಲಾಗಿದೆ.*

ಬ್ರುಸಲ್ಸ್ ನಲ್ಲಿರುವ ಇಂಟರ್ನ್ಯಾಷನಲ್ ಕಾಮನ್ ಲಾ ಕೋರ್ಟ್ ಆಫ್ ಜಸ್ಟಿಸ್ ನ ಎದುರು ಪುರಾವೆ ನೀಡಿದ ಈ ವಾರದ ಇತ್ತೀಚಿನ ಸಾಕ್ಷಿಯ ಪ್ರಕಾರ, ಐರೋಪ್ಯ ರಾಜಮನೆತನದವರಿಂದ ಹದಿಹರೆಯದವರಿಗೆ ಮಾದಕ ವಸ್ತುಗಳನ್ನು ನೀಡಿ, ಅವರನ್ನು ಬೆತ್ತಲೆ ಮಾಡಿ, ಬಲಾತ್ಕಾರ ಮಾಡಿ, ಕಾಡಿನಲ್ಲಿ ಅವರನ್ನು ಬೇಟೆಯಾಡಿ ಕೊಲ್ಲಲಾಗಿತ್ತು. ಜಾಗತಿಕ ಗಣ್ಯ ನೈನ್ತ್ ಸರ್ಕಲ್ ಸಟ್ಯಾನಿಕ್ ಚೈಲ್ಡ್ ಸ್ಯಾಕ್ರಿಫೈಸ್ ಕಲ್ಟ್ ಜಾಲದ ಈ ಮನುಷ್ಯರನ್ನು ಬೇಟೆಯಾಡುವ ಕೂಟಗಳ ಬಗ್ಗೆ ವರದಿಗಳನ್ನು ನೀಡುವವರ ಪೈಕಿ ಈ ಮಹಿಳೆಯು ನಾಲ್ಕನೇ ಸಾಕ್ಷಿಯಾಗಿದ್ದರು. ಈ ಮನುಷ್ಯನನ್ನು ಬೇಟೆಯಾಡುವ ಕೂಟಗಳಿಗೆ ಮಕ್ಕಳನ್ನು ಬೆಲ್ಜಿಯಂ ಮತ್ತು ಹಾಲೆಂಡ್ ಗಳಲ್ಲಿನ ಎಳೆಯ ಅಪರಾಧಿಗಳ ಬಂಧನ ಕೇಂದ್ರಗಳಿಂದ ಪಡೆಯಲಾಗುತ್ತಿತ್ತು ಎಂದು ಆಕ್ಟೋಪಸ್ ಎಂಬ ಹೆಸರಿನ ನೆದರ್ಲ್ಯಾಂಡ್ಸ್ ನ ಕ್ರಿಮಿನಲ್ ಮಾದಕ ವಸ್ತು ಸಿಂಡಿಕೇಟ್ ನ ಒಬ್ಬ ಮಾಜಿ ಸದಸ್ಯರು ಸಾಕ್ಷಿ ಹೇಳಿದ್ದಾರೆ.

2004 ರಲ್ಲಿ ನಾನು, ನೆದರ್ಲ್ಯಾಂಡ್ಸ್ ನ ಉನ್ನತ ದರ್ಜೆಯ ಜನರ ಒಂದು ಗುಂಪಿಗಾಗಿ ನಡೆಸಲಾದ ಮಾದಕ ವಸ್ತುಗಳನ್ನು ನೀಡಲಾದ ಮಕ್ಕಳ ಚಿತ್ರಹಿಂಸೆ, ಬಲಾತ್ಕಾರ ಮತ್ತು ಕೊಲೆಯ ಅವಧಿಗಳಿಗೆ ಅನೈಚ್ಛಿಕ ಸಾಕ್ಷಿಯಾಗಿದ್ದೆ" ಎಂದು ಒಬ್ಬ ಮಹಿಳೆ ಹೇಳಿದರು. "ಬೆಲ್ಜಿಯಂನಲ್ಲಿ ಬ್ರುಸಲ್ಸ್ ಹತ್ತಿರದ ಒಂದು ಬೇಟೆಯ ಕೂಟಕ್ಕೆ ನನ್ನನ್ನು ಕರೆದುಕೊಂಡು ಹೋಗಲಾಯಿತು. ಅಲ್ಲಿ 14 ರಿಂದ 16 ವರ್ಷದ ಇಬ್ಬರು ಹುಡುಗರು ಮತ್ತು ಒಬ್ಬ ಹುಡುಗಿಯು ಜಾಗತಿಕ ಗಣ್ಯರಿಂದ ಬೇಟೆಯಾಡಲ್ಪಟ್ಟು ಕೊಲ್ಲಲ್ಪಡುವುದನ್ನು ನಾನು ನೋಡಿದೆನು. ಮನುಷ್ಯರನ್ನು ಬೇಟೆಯಾಡುವ ಕೂಟವು ನೆದರ್ಲ್ಯಾಂಡ್ಸ್ ರಾಯಲ್ ಗಾರ್ಡ್ಸ್ ಅವರಿಂದ ಭದ್ರ ಕಾವಲಿಗೆ ಒಳಗಾಗಿತ್ತು. ಬೆಲ್ಜಿಯಂನ ಕಿಂಗ್ ಆಲ್ಬರ್ಟ್ ಹಾಜರಿದ್ದರು ಎಂದು ನನಗೆ ತಿಳಿಸಲಾಯಿತು."

ತಾವು ಮಕ್ಕಳಾಗಿದ್ದಾಗ ಮತ್ತು ತರುಣರಾಗಿದ್ದಾಗ, ಮನುಷ್ಯರನ್ನು ಬೇಟೆಯಾಡುವ ಕೂಟಗಳಿಗೆ ಬಲವಂತವಾಗಿ ಹಾಜರುಪಡಿಸಲಾಗುತ್ತಿತ್ತು ಮತ್ತು ಅಲ್ಲಿ ತಮ್ಮನ್ನು ಮತ್ತು ಇತರ ಮಕ್ಕಳನ್ನು ಬಲಾತ್ಕಾರ ಮಾಡಿ, ಕೆಲವರನ್ನು ಕೊಂದು, ಸತ್ತ ಹುಡುಗರ ಶಿಶ್ನಗಳನ್ನು ಕತ್ತರಿಸಲಾಗುತ್ತಿತ್ತು ಎಂದು ನಾಲ್ಕು ಸಾಕ್ಷಿಗಳು ದೃಢಪಡಿಸಿದ್ದಾರೆ. ಹುಡುಗರ ಶಿಶ್ನಗಳನ್ನು ಗೋಡೆಯ ಮೇಲೆ ಪಾರಿತೋಷಕಗಳಂತೆ ಪ್ರದರ್ಶಿಸಲಾಗಿದ್ದ ಒಂದು ಡಚ್ ಗ್ರಾಮಪ್ರದೇಶದಲ್ಲಿನ ಅರಮನೆ ಇತ್ತು ಎಂದು ಹೇಳಲಾಗಿದೆ. ಕೆಲವು ಬೇಟೆಯ ಕೂಟಗಳನ್ನು ನೆದರ್ಲ್ಯಾಂಡ್ಸ್ ನ ಬೀಟ್ರಿಕ್ಸ್ ಮಹಾರಾಣಿಯ ಅರಮನೆಯ ಆವರಣದಲ್ಲಿ ನಡೆಸಲಾಗುತ್ತಿತ್ತು.

ನಾಲ್ಕು ವರ್ಷದ ಮಗುವಾಗಿ, ಮಕ್ಕಳ ಕೊಲೆಗಳನ್ನು ನೋಡಲು ತನ್ನನ್ನು ಬಲವಂತಪಡಿಸಲಾಗಿತ್ತು. ಅದರಲ್ಲಿ ಮಾಜಿ ಪೋಪ್ ರಾಟ್ಜಿಂಗರ್, ಒಬ್ಬ ಡಚ್ ಕ್ಯಾಥೊಲಿಕ್ ಕಾರ್ಡಿನಲ್, ಅಲ್ಲದೆ ನೆದರ್ಲ್ಯಾಂಡ್ಸ್ ನ ಬೀಟ್ರಿಕ್ಸ್ ಮಹಾರಾಣಿಯ ತಂದೆ ಮತ್ತು  ಬಿಲ್ಡರ್ಬರ್ಗ್ ಗುಂಪಿನ ಸ್ಥಾಪಕ, ಡಚ್ ರಾಜಕುಮಾರ ಬರ್ನಾರ್ಡ್ ಒಳಗೊಂಡಿದ್ದರು ಎಂದು ಡಚ್ ತೆರಪಿಸ್ಟ್ ಟೋಶ್ ನೇಯನ್ಹಾಶ್ ಹೇಳಿದರು. "ಮಾಜಿ ಪೋಪ್ ಜೋಸೆಫ್ ರಾಟ್ಜಿಂಗರ್ ಒಂದು ಚಿಕ್ಕ ಹುಡುಗಿಯನ್ನು ಕೊಲ್ಲುವುದನ್ನು ನಾನು ನೋಡಿದೆನು" ಎಂದು ಮತ್ತೊಬ್ಬ ಸಾಕ್ಷಿ ದೃಢಪಡಿಸಿದರು. "ಅದು 1987 ರ ಕಾಲದಲ್ಲಿ ಒಂದು ಫ್ರೆಂಚ್ ಷ್ಯಾಟೋನಲ್ಲಿ ನಡೆಯಿತು. ಅದು ಅಸಹ್ಯವಾಗಿತ್ತು, ಭೀಕರವಾಗಿತ್ತು ಮತ್ತು ಕೇವಲ ಒಂದು ಸಲ ನಡೆಯಲಿಲ್ಲ. ರಾಟ್ಜಿಂಗರ್ ಮತ್ತು ಬರ್ನಾರ್ಡ್ ಪಾಲ್ಗೊಂಡ ಹೆಚ್ಚು ಪ್ರಮುಖ ವ್ಯಕ್ತಿಗಳಲ್ಲಿ ಕೆಲವರಾಗಿದ್ದರು."

ಐರ್ಲ್ಯಾಂಡ್, ಸ್ಪೇನ್ ಮತ್ತು ಕೆನಡಾಗಳಲ್ಲಿ 34 ಮಕ್ಕಳ ಸಾಮೂಹಿಕ ಗೋರಿ ತಾಣಗಳನ್ನು ಕಂಡುಹಿಡಿಯಲಾಯಿತು ಮತ್ತು ನೈನ್ತ್ ಸರ್ಕಲ್ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಂಡುಬಂದಿತು. ಅತ್ಯಂತ ದೊಡ್ಡದು ಬ್ರ್ಯಾಂಟ್ ಫರ್ಡ್ ಒಂಟಾರಿಯೊದಲ್ಲಿರುವ ಮೊಹಾಕ್ ಇಂಡಿಯನ್ ವಸತಿ ಶಾಲೆಯದ್ದಾಗಿತ್ತು, ಅಲ್ಲಿ ಕ್ಯಾಥೊಲಿಕ್ ಚರ್ಚ್, ಕೆನಡಾದ ಸರ್ಕಾರ ಮತ್ತು ಇಂಗ್ಲಿಷ್ ಮಹಾರಾಣಿ ಅವರು ವೃತ್ತಿಪರ ಪುರಾತತ್ವಶಾಸ್ತ್ರಜ್ಞರಿಂದ ಉತ್ಖನನವನ್ನು ನಿಲ್ಲಿಸುವ ಮೊದಲು 2008 ರಲ್ಲಿ ಮಕ್ಕಳ ಕಳೇಬರಗಳನ್ನು ಗುರುತಿಸಲಾಗಿತ್ತು. 2013 ರ ಐಸಿಎಲ್ ಸಿಜೆ ನ್ಯಾಯಾಲಯವು, ಕಾಮ್ಲೂಪ್ಸ್ ಬ್ರಿಟಿಷ್ ಕೊಲಂಬಿಯಾದಲ್ಲಿ 1964 ರ ಅಕ್ಟೋಬರ್ 10 ರಂದು ಒಂದು ಕ್ಯಾಥೊಲಿಕ್ ವಸತಿ ಶಾಲೆಯಿಂದ ಹತ್ತು ಸ್ಥಳೀಯ ಮಕ್ಕಳು ಕಾಣೆಯಾದುದಕ್ಕೆ ರಾಣಿ ಎಲಿಜಬೆತ್ ಮತ್ತು ರಾಜಕುಮಾರ್ ಫಿಲಿಪ್ ಅವರನ್ನು ಅಪರಾಧಿ ಎಂದು ತೀರ್ಮಾನಿಸಿತ್ತು. 2014 ರ ನ್ಯಾಯಾಲಯದ ಮೊದಲ ಎರಡು ವಾರಗಳಲ್ಲಿ, ಮೊಹಾಕ್ ಮಕ್ಕಳ

ಮತ್ತು ಶಿಶುಗಳ ಬಲಾತ್ಕಾರ ಮತ್ತು ಕೊಲೆಯಲ್ಲಿ ಡಚ್ ಮತ್ತು ಬೆಲ್ಜಿಯನ್ ರಾಜಮನೆತನದ ಭಾಗಿಗಳನ್ನು ಸಾಕ್ಷಿಗಳು ಗುರುತಿಸಿದರು. ಬರ್ನಾರ್ಡ್ ಮತ್ತು ರಾಜಕುಮಾರ ಹೆಂಡ್ರಿಕ್ (ಹಾಲೆಂಡ್ ನ ರಾಣಿ ವಿಲ್ಹೆಲ್ಮೀನ ಅವರ ಸಂಗಾತಿ) ಅವರನ್ನು ಹೆಸರಿಸಲಾಯಿತು.

ಮನುಷ್ಯರ ಬೇಟೆಯ ಕೂಟಗಳಲ್ಲಿ ದಿವಂಗತ ರಾಜಕುಮಾರ ಯೊಹಾನ್ ಫ್ರಿಸೊ ಹಾಗೂ ಅವರ ಪತ್ನಿ ಮೇಬಲ್ ವಿಸ್ ಸ್ಮಿಟ್, ಮಾಜಿ ಮಂತ್ರಿಗಳು, ಡಚ್ ಸೈನ್ಯದ ಉನ್ನತ ಅಧಿಕಾರಿ, ನೆದರ್ಲ್ಯಾಂಡ್ಸ್ ನ ರಾಡ್ ವಾನ್ ಸ್ಟೇಟ್ ನ ಅಧೀನ ಅಧಿಕಾರಿ, ರಾಣಿ ಬೀಟ್ರಿಕ್ಸ್ ನ ನಂತರದ ವೈಸರಾಯ್ ಮತ್ತು ಯುಎಸ್ ನ ಕೆಲವರು ಸೇರಿದಂತೆ ಇತರ ಜಾಗತಿಕ ವ್ಯಾಪಾರ ಮತ್ತು ರಾಜಕೀಯ ನಾಯಕರು ಹಾಜರಿದ್ದರು ಎಂದು ಹೇಳಲಾಗಿದೆ. “ಈಗಿನ ರಾಜನಾದ ವಿಲೆಮ್ ಅಲೆಕ್ಸಾಂಡರ್ ಮತ್ತು ರಾಜ ಫಿಲಿಪ್ ಮತ್ತು ಅವರ ಹೆಂಡತಿಯರು ಮಕ್ಕಳ ಮೇಲಿನ ಈ ಅನ್ಯಾಯ ಮತ್ತು ಕೊಲೆಗಳ ಬಗ್ಗೆ ಖಂಡಿತವಾಗಿ ಅರಿತಿದ್ದಾರೆ” ಎಂದು ಒಬ್ಬ ಸಾಕ್ಷಿ ಹೇಳಿದರು. “ಅವರು ಅದರ ಬಗ್ಗೆ ಏನೂ ಮಾಡುವುದಿಲ್ಲ ಮತ್ತು ತನಿಖೆಗಳನ್ನು ಮತ್ತು ನಡೆಯಬೇಕಾದ ಕಟ್ಟಳೆಗಳನ್ನು ನಿಲ್ಲಿಸುವವರು ಅವರೇ ಆಗಿರಬಹುದು.”

ಆಗಸ್ಟ್ 2014 ರಲ್ಲಿ ಇಲ್ಲಿ ತೋರಿಸಲಾಗಿರುವ ವೆಬ್ಸೈಟ್ ಗಳು, ಡಚ್ ಭಾಷೆಯ ಮೂರು ವೆಬ್ಸೈಟ್ ಗಳು, ಇಂಟರ್ನೆಟ್ ತಲುಪಿದಾಗ ಹಾಲೆಂಡ್ ರಾಜನ ಸಹೋದರ ರಾಜಕುಮಾರ ಯೊಹಾನ್ ಫ್ರಿಸೊ ಕೋಮದಲ್ಲಿ ತೀರಿಕೊಂಡರು. ಫ್ರಿಸೊ ಅವರು ಮನುಷ್ಯರ ಬೇಟೆಯ ಮತ್ತು ಕೊಲ್ಲುವ ಕೂಟಗಳಲ್ಲಿ ಹಾಜರಿದ್ದರು ಎಂದು ಆ ವೆಬ್ ಸೈಟುಗಳು ಬಹಿರಂಗಪಡಿಸಿದವು. “ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳಲು ನೆದರ್ಲ್ಯಾಂಡ್ಸ್ ನ ರಾಜಕಾರಣಿಗಳನ್ನು ಮತ್ತು ಕಾನೂನು ವಿಭಾಗವನ್ನು ಪ್ರೇರೇಪಿಸಲು ವರ್ಷಗಟ್ಟಲೆಯ ಪ್ರಯತ್ನಗಳ ನಂತರ ಈ ಕಥೆ ಇಂಟರ್ನೆಟ್ ತಲುಪಿತು,” ಎಂದು ಒಬ್ಬ ಸಾಕ್ಷಿ ಹೇಳಿದರು. “ಈ ಅಪರಾಧಿಗಳನ್ನು ನಿಲ್ಲಿಸಲು ಯಾರೂ ಏನನ್ನೂ ಮಾಡಲಿಲ್ಲ, ಏಕೆಂದರೆ ಬಹುಶಃ ರಾಣಿ ಬೀಟ್ರಿಕ್ಸ್ ಮತ್ತು ರಾಜ ಆಲ್ಬರ್ಟ್ ತನಿಖೆಗಳಿಗೆ ಅಡ್ಡಿಯುಂಟುಮಾಡಿರಬಹುದು.”

ಮನುಷ್ಯರ ಬೇಟೆಯ ಕೂಟಗಳು ನೆದರ್ಲ್ಯಾಂಡ್ಸ್ ನಲ್ಲಿರುವ ರಾಣಿ ಬೀಟ್ರಿಕ್ಸ್ ಅವರ ಅರಮನೆಯ ಆವರಣದಲ್ಲಿ ನಡೆಯುತ್ತಿದ್ದವು ಎಂದು ಹೇಳಲಾಗುತ್ತದೆ. ಇಬ್ಬರು ಸಾಕ್ಷಿಗಳು ಮಾಜಿ ಪೋಪ್ ಜೋಸೆಫ್ ರಾಟ್ಜಿಂಗರ್ ಮತ್ತು ರಾಣಿ ಬೀಟ್ರಿಕ್ಸ್ ಅವರ ತಂದೆ ದಿವಂಗತ ರಾಜಕುಮಾರ ಬರ್ನಾರ್ಡ್ ಅವರು ಮಕ್ಕಳ ಬಲಿ ಕೊಡುವಾಗ ಹಾಜರಿದ್ದರು ಎಂದು ಹೆಸರಿಸಿದ್ದಾರೆ. ಇಬ್ಬರೂ ನಾಜಿಗಳ ಬಗ್ಗೆ ಸಹಾನುಭೂತಿ ಉಳ್ಳವರಾಗಿದ್ದರು ಎಂದು ಹೇಳಲಾಗಿದೆ.

ನೈಟ್ಸ್ ಆಫ್ ಡಾರ್ಕ್ ನೆಸ್ ಎಂಬ ಹೆಸರಿನ ಮಕ್ಕಳ ಬಲಿ ಕೊಡುವ ಕುಪಂಥದ ಬಗ್ಗೆ ಐಸಿಎಲ್ ಸಿಜೆ ನ್ಯಾಯಾಲಯವು ಜೆಸ್ಯುಟ್ ಆರ್ಕೈವಲ್ ದಾಖಲೆಗಳ ಒಂದು ಸಂಗ್ರಹವನ್ನು ಪಡೆಯಿತು. 1933 ರಲ್ಲಿ, ನೈಟ್ಸ್ ಅನ್ನು ಕ್ಯಾಥೊಲಿಕ್ ಜೆಸ್ಯುಟರು ಮತ್ತು ನಾಜಿ ವಾಫನ್ ಎಸ್.ಎಸ್. ವಿಭಾಗ ಸ್ಥಾಪಿಸಿದರು. ಜರ್ಮನಿಯ ರೇವನ್ಸ್ ಬ್ರಕ್ ಸೆರೆಶಿಬಿರದಲ್ಲಿ ಎಸ್.ಎಸ್. ಚಾಪ್ಲೇನ್ ನ ಸಹಾಯಕರಾಗಿ ಕೆಲಸ ಮಾಡುತ್ತಿರುವಾಗ ರಾಟ್ಜಿಂಗರ್ ಅವರನ್ನು ನೈಟ್ಸ್ ನ ಒಬ್ಬ ಸದಸ್ಯರೆಂದು ಗುರುತಿಸಲಾಗಿತ್ತು ಎಂದು ದಾಖಲೆಗಳು ತೋರಿಸುತ್ತವೆ. ರಾಟ್ಜಿಂಗರ್ ಅವರು ಶಿಬಿರಗಳಿಂದ ಅಪಹರಿಸಲಾದ ಮಕ್ಕಳನ್ನು ಅಥವಾ ರಾಜಕೀಯ ಕೈದಿಗಳನ್ನು ಬಳಸಿ ಮಕ್ಕಳ ಬಲಿ ಕೊಡುವ ವಿಧಿಗಳಲ್ಲಿ ಭಾಗವಹಿಸಿದರು ಎಂದು ಕೂಡ ದಾಖಲೆಗಳು ತಿಳಿಸಿದವು.

ಮಕ್ಕಳನ್ನು ಬಲಿ ಕೊಡುವುದು ವ್ಯಾಟಿಕನ್ ನಲ್ಲಿ ನಿಯತವಾಗಿ ನಡೆಯುತ್ತಿತ್ತು ಎಂದು ಮ್ಯಾಜಿಸ್ಟೀರಿಯಲ್ ಪ್ರಿವಿಲೇಜ್ ಎಂಬ ಮತ್ತೊಂದು ನ್ಯಾಯಾಲಯದ ದಸ್ತಾವೇಜು ಸೂಚಿಸಿತು. ಮಾದಕ ವಸ್ತು ನೀಡಲಾಗಿದ್ದ ಒಬ್ಬ ಮೂರು ವರ್ಷದ ಬಾಲಕನ ಬಲಿಯನ್ನು ನೋಡಲು ತನ್ನನ್ನು ವ್ಯಾಟಿಕನ್ ಕೆಳಗಿನ ಸುರಂಗ ಸಮಾಧಿಗಳಿಗೆ ತರಲಾಯಿತು ಎಂದು 12ವರ್ಷದ ನಾಜೂಕಾದ ವಯಸ್ಸಿನಲ್ಲಿ ಕ್ಯಾಲಿಫೋರ್ನಿಯದ ಸ್ಯಾನ್ ಡಿಯೆಗೊ ಕೌಂಟಿಯ “ಸ್ಯಾಲಿ” ಹೇಳಿದರು. ಅದೇ ವ್ಯಾಟಿಕನ್ ಸುರಂಗ ಸಮಾಧಿಗಳಲ್ಲಿ ತಾನು ಮತ್ತೊಂದು ಪೈಶಾಚಿಕ ಮಕ್ಕಳ ಬಲಿ ಕೊಡುವ ವಿಧಿಯನ್ನು ನೋಡಿದ್ದಾಗಿ “ಮಾರಿಯಾ” ಎಂಬವರು 24 ವರ್ಷಗಳ ಹಿಂದೆ ತನಗೆ ಹೇಳಿದ್ದರು ಎಂದು ಈ ವಿಡಿಯೊದಲ್ಲಿ ಆಕೆಯನ್ನು ಸಂದರ್ಶಿಸುವವರು ಹೇಳಿದರು.

ಒಬ್ಬ ಕ್ಯಾಥೊಲಿಕ್ ನನ್ ಳ ಸೆಪ್ಟಿಕ್ ಟ್ಯಾಂಕಿನಲ್ಲಿ ಹೂಳಲಾಗಿದ್ದ ಸುಮಾರು 800 ಶಿಶುಗಳ ಅಂಗಗಳನ್ನು ಕತ್ತರಿಸಲಾಗಿತ್ತು, ತಲೆಗಳನ್ನು ಕತ್ತರಿಸಲಾಗಿತ್ತು ಮತ್ತು ತುಂಡು-ತುಂಡುಗಳಾಗಿದ್ದವು ಎಂದು ಕಳೆದ ವಾರ ಒಬ್ಬ ಐರಿಷ್ ಪೋಲಿಸ್ ತನಿಖೆದಾರರು ಐಸಿಎಲ್ ಸಿಜೆ ನ್ಯಾಯಾಲಯಕ್ಕೆ ವರದಿ ಮಾಡಿದರು - ಆ ಶಿಶುಗಳು ಪೈಶಾಚಿಕ ಮಕ್ಕಳನ್ನು ಬಲಿ ಕೊಡುವ ವಿಧಿಗಳಲ್ಲಿ ಕೊಲ್ಲಲ್ಪಟ್ಟಿರಬಹುದು ಎಂಬುದಕ್ಕೆ ಸೂಚನೆಗಳಾಗಿದ್ದವು. ಕ್ಯಾಥೊಲಿಕ್ ನಾಯಕರಿಂದ, ಐರೋಪ್ಯ ರಾಜಮನೆತನಗಳ ಕುಟುಂಬದ ಸದಸ್ಯರಿಂದ ಮತ್ತು ಇತರ ಜಾಗತಿಕ ಗಣ್ಯರಿಂದ 2010 ರಷ್ಟು ಇತ್ತೀಚೆಗೆ ಮಕ್ಕಳ ಬಲಾತ್ಕಾರ, ಚಿತ್ರಹಿಂಸೆ ಮತ್ತು ಕೊಲೆಯ ಬಗ್ಗೆ ಕಳೆದ ಎರಡು ತಿಂಗಳುಗಳಲ್ಲಿ ಐಸಿಎಲ್ ಸಿಜೆ ನ್ಯಾಯಾಲಯವು ಹೃದಯ-ವಿದ್ರಾವಕ ಸಾಕ್ಷ್ಯಗಳನ್ನು ಕೇಳಿದೆ. ನೈನ್ತ್ ಸರ್ಕಲ್ ಸಟ್ಯಾನಿಕ್ ಚೈಲ್ಡ್ ಸ್ಯಾಕ್ರಿಫೈಸ್ ಕಲ್ಟ್ ನ ಕೊಲೆಯ ತಾಣಗಳು ವ್ಯಾಟಿಕನ್ ಮತ್ತು ಬೆಲ್ಜಿಯಂ, ಹಾಲೆಂಡ್, ಸ್ಪೈನ್, ಆಸ್ಟ್ರೇಲಿಯ, ಫ್ರಾನ್ಸ್, ಇಂಗ್ಲೆಂಡ್ ಮತ್ತು ಯುಎಸ್ ಗಳಲ್ಲಿ ಖಾಸಗಿ ಎಸ್ಟೇಟುಗಳು, ಸೈನಿಕ ವ್ಯವಸ್ಥೆಗಳು ಮತ್ತು ತೋಪುಗಳು ಸೇರಿದಂತೆ ಕ್ಯಾಥೊಲಿಕ್ ಕ್ಯಾಥೆಡ್ರಲ್ಲುಗಳ ಸುರಂಗ ಸಮಾಧಿಗಳಲ್ಲಿ ಇವೆ ಎಂದು ಹೇಳಲಾಗಿದೆ.

ಹೊಸದಾಗಿ ಕಂಡುಕೊಳ್ಳಲಾದ ಪುರಾವೆ ಮತ್ತು ನೈನ್ತ್ ಸರ್ಕಲ್ ಸಟ್ಯಾನಿಕ್ ಚೈಲ್ಡ್ ಸ್ಯಾಕ್ರಿಫೈಸ್ ಕಲ್ಟ್ ಚಟುವಟಿಕೆಗಳ ಬಗ್ಗೆ ಸಾಕ್ಷಿ ಹೇಳಲು ಮುಂದೆ ಬರುತ್ತಿರುವ ಹಲವಾರು ಹೊಸ ಸಾಕ್ಷಿಗಳು ಐಸಿಎಲ್ ಸಿಜೆ ನ್ಯಾಯಾಲಯವನ್ನು ಮೂಕಗೊಳಿಸಿವೆ. ಅವರು ಅಂತಾರಾಷ್ಟ್ರೀಯ ಮಕ್ಕಳ ಬಲಿ ಕೊಡುವಿಕೆ, ಅಪಹರಣ, ಶೋಷಣೆ ಮತ್ತು ಮಾದಕ ವಸ್ತುಗಳ ರಿಂಗ್ ಗಳಲ್ಲಿ ನೈನ್ತ್ ಸರ್ಕಲ್ ಸಟ್ಯಾನಿಕ್ ಕಲ್ಟ್ ನ ಸದಸ್ಯರ ಸಂಭಾವ್ಯ ಪಾಲ್ಗೊಳ್ಳುವಿಕೆಯನ್ನು ಬಹಿರಂಗಪಡಿಸಿದ್ದಾರೆ. ಐವರು ಅಂತಾರಾಷ್ಟ್ರೀಯ ನ್ಯಾಯಾಧೀಶರು ಮತ್ತು 27 ಜ್ಯೂರಿ ಸದಸ್ಯರು, ಕೇಸುಗಳ ಸಂಕೀರ್ಣತೆಯ ಕಾರಣ, ಕನಿಷ್ಠಪಕ್ಷ ಒಂದು ವರ್ಷವಾದರೂ ವಿಚಾರಣೆ ಅವಧಿಯಲ್ಲಿರುತ್ತಾರೆ ಎಂದು ನಿರೀಕ್ಷಿಸಲಾಗಿತ್ತು.

ಅಪರಾಧಗಳನ್ನು ಮಾಡಿರುವ ಸಂಶಯವಿರುವ ಈ ಜಾಗತಿಕ ಗಣ್ಯರ ಮೇಲೆ ಮೊಕದ್ದಮೆ ನಡೆಸುವುದಕ್ಕೆ ಕಾರಣವಾಗಬಹುದಾದ ಪ್ರಮಾಣ ಮಾಡಿ ಹೇರಲಾದ ಸಾಕ್ಷ್ಯ ಅಥವಾ ಪುರಾವೆಯನ್ನು ನೀಡಲು ಒಪ್ಪುವ ನಾಗರಿಕರಿಗೆ ಅಥವಾ ವ್ಯಾಟಿಕನ್ ನ, ಇಂಗ್ಲೆಂಡ್ ಮಹಾರಾಣಿಯ, ಚರ್ಚುಗಳ ಅಥವಾ ಸರ್ಕಾರಗಳ ಉದ್ಯೋಗಿಗಳಿಗೆ ಸಾಮೂಹಿಕ ಕ್ಷಮಾದಾನವನ್ನು ನೀಡುವುದಾಗಿ ಹೇಳಲಾಗಿದೆ. 10,000 ಯುರೊಗಳು ಅಥವಾ ಸುಮಾರು 13,660 ಡಾಲರ್ ಗಳ ವರೆಗೆ ಬಹುಮಾನಗಳು ಐಸಿಎಲ್ ಸಿಜೆ ನ್ಯಾಯಾಲಯದ ಮೂಲಕ ಲಭ್ಯವಿದ್ದವು.

ಐಸಿಎಲ್ ಸಿಜೆ ನ್ಯಾಯಾಲಯವು 13 ದೇಶಗಳಲ್ಲಿ 450ಕ್ಕೂ ಹೆಚ್ಚು ಸಾಮಾನ್ಯ ಕಾನೂನು ಶಾಂತಿ ಅಧಿಕಾರಿಗಳನ್ನು ಹೊಂದಿದ್ದು, 51 ಸ್ಥಳೀಯ ಚಾರ್ಟರ್ಡ್ ಗುಂಪುಗಳು ಕಾರ್ಯಾಚರಣೆಯಲ್ಲಿದ್ದವು. ಇಂಟರ್ನ್ಯಾಷನಲ್ ಟ್ರೈಬ್ಯೂನಲ್ ಇಂಟು ಕ್ರೈಮ್ಸ್ ಆಫ್ ಚರ್ಚ್ ಅಂಡ್ ಸ್ಟೇಟ್ ಮೂಲಕ ಅರ್ಜಿ ಸಲ್ಲಿಸಿದ ಸಾಮಾನ್ಯ ಕಾನೂನು ಗುಂಪುಗಳಿಗೆ ಸ್ಥಳೀಯ ಸಂಘಟನಾ ನಿಧಿಗಳು ಲಭ್ಯವಿದ್ದವು. ನ್ಯಾಯಾಲಯದ ಅಧಿಕಾರಿಗಳನ್ನು ಅಥವಾ ಐಟಿಸಿಸಿಎಸ್ ಕ್ಷೇತ್ರ ಕಾರ್ಯದರ್ಶಿ ಕೆವಿನ್ ಅನೆಟ್ ಅವರನ್ನು ಸಂಪರ್ಕಿಸಲು ಇಲ್ಲಿಗೆ ಇಮೇಲ್ ಮಾಡಿ ಅಥವಾ ಕರೆ ಮಾಡಿ: itccscentral@gmail.com, info@iclcj.com, admin@iclcj.com, hiddenfromhistory1@gmail.com, 250-591-4573 ((ಕೆನಡಾ), or 386-323-5774 ((ಯುಎಸ್ಎ).

## ಐವರಿ ಕೋಸ್ಟ್

*(ಫ್ರೆಂಚ್ ಭಾಷೆಯಿಂದ ಅನುವಾದಿಸಲಾಗಿದೆ)*

ಈ ಸುದ್ದಿಪತ್ರಿಕೆಗಳಿಗಾಗಿ ನಾನು ನಿಜವಾಗಿಯೂ ಕೃತಜ್ಞನಾಗಿದ್ದೇನೆ. ನಾನು ಅವನ್ನು ಹಂಚಿದ್ದೇನೆ ಮತ್ತು ಅವನ್ನು ಓದಲು ಒಪ್ಪಿಕೊಳ್ಳುವ ಪುರುಷರ ಮತ್ತು ಸ್ತ್ರೀಯರ ಬದುಕುಗಳನ್ನು ಅವು ಬದಲಾಯಿಸುತ್ತಿವೆ.

ದೇವರು ತನ್ನ ಸರ್ವ-ಶಕ್ತವಾದ ನ್ಯಾಯಪರತೆಯಿಂದ ನಿಮ್ಮನ್ನು ಎತ್ತಿಹಿಡಿಯಲಿ, ಮತ್ತು ಪ್ರಭು ನಿಮ್ಮನ್ನು ತನ್ನ ಸೇವೆಗಾಗಿ ಕರೆದುಕೊಂಡಿರುವ ಸತ್ಯವನ್ನು ಪ್ರಕಟಿಸುವುದನ್ನು ಮುಂದುವರಿಸಲಿ. ಹೃದಯದಲ್ಲಿ ನಾವು ನಿಮ್ಮೊಂದಿಗಿದ್ದೇವೆ, ಏಕೆಂದರೆ ಕಾರಾಗೃಹವು ನೀವು ದೇವರ ಸೇವೆಯನ್ನು ಮಾಡದಂತೆ ತಡೆಯಲು ಸಾಧ್ಯವಿಲ್ಲ, ಏಕೆಂದರೆ ಕಾರಾಗೃಹದ ಹೊರಗಿರುವವರು ಅವರು ಅಂದುಕೊಂಡಿರುವುದಕ್ಕಿಂತ ಹೆಚ್ಚು ಬಂಧನದಲ್ಲಿದ್ದಾರೆ. ಸಕಾಲದಲ್ಲಿ ಪ್ರಭುವು ನಿಮ್ಮನ್ನು ಘ್ಲಾಪಿಸಿಕೊಳ್ಳುತ್ತಾರೆ.

ಕೊನಾನ್ ಅಲೆಕ್ಸಿ — ಲಗೂನೆ, ಐವರಿ ಕೋಸ್ಟ್

# ಲೋಟನ ಹೆಂಡತಿ

*(ಪುಟ 5 ರಿಂದ ಮುಂದುವರಿದಿದೆ)*

ಪರಿವರ್ತಿಸಲಾಗಲಿಲ್ಲ ಎಂದು ನೀವು ನಂಬಬಹುದು, ಆದರೆ ಅವಳನ್ನು ಪರಿವರ್ತಿಸಲಾಯಿತು ಎಂದು ದೇವರು ಹೇಳಿದರು, ಮತ್ತು ನಾನು ನನ್ನ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಶಕ್ತಿಯೊಂದಿಗೆ ಇದನ್ನು ನಿಜವೆಂದು ನಂಬುತ್ತೇನೆ. ನೀವು ಈ ಲೋಕದಿಂದ ಹೊರಬರಲು ಬಯಸುತ್ತೀರಾ, ಅಥವಾ ಲೋಟನ ಹೆಂಡತಿ ಮಾಡಿದಂತೆ, ಹಿಂದಿರುಗಿ ಅದನ್ನು ನೋಡಲು ಬಯಸುತ್ತೀರಾ? ಈ ಲೋಕ ಮತ್ತು ಇದರಲ್ಲಿರುವ ಎಲ್ಲವೂ ದಂಡನೆಗೆ ಗುರಿಯಾಗಿವೆ.[16]

ನೀವು ನಿತ್ಯಜೀವವನ್ನು ಪಡೆಯಬೇಕೆಂದು ಮತ್ತು ದಂಡನೆಗೆ ಒಳಗಾಗದಿರಲು ಬಯಸಿದಲ್ಲಿ, ಈ ಪ್ರಾರ್ಥನೆಯನ್ನು ಹೇಳಿರಿ:

**ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[17] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬಿದ್ದೇನೆ.[18] ನನ್ನ ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕಾಗಿ ಆತ ಶಿಲುಬೆಯಲ್ಲಿ ಮರಣ ಹೊಂದಿದನು ಮತ್ತು ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬಿದ್ದೇನೆ.[19] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[20] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬಿದ್ದೇನೆ.[21] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[22] ಕಾಲ್ವಾರಿಯಲ್ಲಿ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿ.[23] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ ಎಂಬುದು ನನಗೆ ಗೊತ್ತು. ಏಕೆಂದರೆ ನಿಮ್ಮ ಪದವಾದ ಬೈಬಲ್ ಹೀಗೆಂದು ಹೇಳುತ್ತದೆ.[24] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ಪದ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[25] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[26] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಳ್ಳುವ ಹಾಗೂ ಇನ್ನು ಮೇಲೆ ಪಾಪ ಮಾಡದಿರುವ ಮೂಲಕ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[27]**

ರಕ್ಷಣೆಯ ಬಳಿಕ ಯೇಸು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ, ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ, ದೀಕ್ಷಾಸ್ನಾನ ಪಡೆದರೆಂದು ಹೇಳಲಾಗುತ್ತದೆ.[28] ಬೈಬಲ್ ಸೊಸೈಟಿ ಆಫ್ ಇಂಡಿಯಾದ 'ಸತ್ಯವೇದವು" [ಇಂಗ್ಲಿಷ್ ನ ಕೆಜೆವಿ] ಬೈಬಲ್ ಅನ್ನು ಶ್ರದ್ಧೆಯಿಂದ ಓದಿ, ಮತ್ತು ಅದು ಹೇಳಿದ್ದನ್ನು ಮಾಡಿ.[29]

ನಿಮ್ಮ ರಕ್ಷಣೆಯ ಕುರಿತು ನೀವು ಬೇರೆಯವರಿಗೆ ಹೇಳಬೇಕೆಂದು ದೇವರು ಬಯಸುತ್ತಾರೆ (ಮಾರ್ಕ 16:15). ಪ್ಯಾಸ್ಟರ್ ಟೋನಿ ಅಲಾಮೊ ಅವರ ಸಾಹಿತ್ಯದ ವಿತರಕರಾಗುವ ಮೂಲಕ ನೀವು ಇದನ್ನು ಮಾಡಬಹುದು. ನಾವು ನಿಮಗೆ ಸಾಹಿತ್ಯವನ್ನು ಉಚಿತವಾಗಿ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಇತರರೊಂದಿಗೆ ಹಂಚಿಕೊಳ್ಳಿ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ, ಯೇಸು ಆದೇಶಿಸುವಂತೆ, ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೇವೆ ಎಂದು ಕೇಳುತ್ತೀರೋ? ದಶಾಂಶ, ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಾಂಶವನ್ನು [ದಶಾಂಶವನ್ನು ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**16** ಯೆಶಾಯ 24:19-23, ಮತ್ತಾಯ 24:3-35, 2 ಪೇತ್ರನು 3:10-12, ಪ್ರಕಟನೆ 8:7-13, 9:1-19, 11:19, 16:2-4, 8-10, 12, 17-21, 21:1 **17** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **18** ಮತ್ತಾಯ 26:63-64, 27:54, ಲೂಕ 1:30-33, ಯೋಹಾನನು 9:35-37, ರೋಮಾಪುರದವರಿಗೆ 1:3-4 **19** ಅಪೊಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನನು 1:7, ಪ್ರಕಟನೆ 5:9 **20** Psa. 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನನು 2:19, 21, 10:17-18, 11:25, ಅಪೊಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **21** ಲೂಕ 22:69, ಅಪೊಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **22** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **23** ಎಫೆಸದವರಿಗೆ 2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನನು 1:7, ಪ್ರಕಟನೆ 1:5, 7:14 **24** ಮತ್ತಾಯ 26:28, ಅಪೊಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ 1:7, Col. 1:14 **25** ಮತ್ತಾಯ 21:22, ಯೋಹಾನನು 6:35, 37-40, ರೋಮಾಪುರದವರಿಗೆ 10:13 **26** ಇಬ್ರಿಯರಿಗೆ 11:6 **27** ಯೋಹಾನನು 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **28** ಮತ್ತಾಯ 28:18-20, ಯೋಹಾನನು 3:5, ಅಪೊಸ್ತಲರ ಕೃತ್ಯಗಳು 2:38, 19:3-5 **29** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವನು 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

---

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**

**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: (661) 252-5686 • Fax (661) 252-4362**

**www.alamoministries.com • info@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

ಆರಾಧನೆಗಳನ್ನು ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ರಾತ್ರಿ 8 ಗಂಟೆಗೆ ಮತ್ತು ಇತರ ತಾಣಗಳಲ್ಲಿ ಪ್ರತಿ ರಾತ್ರಿ ನಡೆಸಲಾಗುತ್ತದೆ.

ಮಾಹಿತಿಗಾಗಿ ದಯವಿಟ್ಟು (908) 937-5723 ಗೆ ಕರೆ ಮಾಡಿ. ಪ್ರತಿ ಆರಾಧನೆಯ ನಂತರ ಊಟೋಪಚಾರವಿರುತ್ತದೆ.

333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.

*ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯದ ವಿತರಕರಾಗುವ ಮೂಲಕ ಆತ್ಮಗಳ ಕೊಯ್ಲಿನಲ್ಲಿ ಶ್ರಮಜೀವಿಯಾಗಿರಿ.*

*ನಮ್ಮ ಎಲ್ಲಾ ಸಾಹಿತ್ಯ ಮತ್ತು ಆಡಿಯೊ ಸಂದೇಶಗಳು, ಷಿಪಿಂಗ್ ಸೇರಿದಂತೆ ಶುಲ್ಕರಹಿತವಾಗಿವೆ. ಅವುಗಳಿಗಾಗಿ ನಿಮ್ಮಿಂದ ಯಾರಾದರೂ ಶುಲ್ಕ ಪಡೆಯಲು ಪ್ರಯತ್ನಿಸುತ್ತಿದ್ದರೆ, ದಯವಿಟ್ಟು (661) 252-5686 ಗೆ ಕಲೆಕ್ಟ್ ಕರೆ ಮಾಡಿ.*

ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೊಸ್ತಲರ ಕೃತ್ಯಗಳು 4:12).

ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.

ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:

© Copyright October 2014 All rights reserved World Pastor Tony Alamo ®Registered October 2014

KANNADA—Vol. 20300—*Lot's Wife*